BV
ಕನ್ನಡ ದಿನಪತ್ರಿಕೆ
14 ಮಾರ್ಚ್ | ಗುರುವಾರ
14 MARCH 2024

# ಬೆಳಗಾವಿ ವರದಿ

ಪ್ರಧಾನ ಸಂಪಾದಕ : ಸತೀಶ ಬ ಗುಡಗೆನಟ್ಟಿ

BELAGAVI VARADI KANNADA DAILY NEWS PAPER

ಗಡಿ ಜಿಲ್ಲೆಯ ಧ್ವನಿ...

₹4 | ಸಂಪುಟ – 5 ಸಂಚಿಕೆ – 23 ಪುಟ – 4 | RNI . KARKAN/2020/79084 | ADVRT EMAIL. BELAGAVIVARADIEDITOR@GMAIL.COM | NEWSBELAGAVI@GMAIL.COM | 9900332089 | REG.NO G-2/PMG/KA/NK/BM/139/2024-26




## ತರಬೇತಿ ವೇಳೆ ತೇಜಸ್ ವಿಮಾನ ಪತನ

ಜೈಪುರ: ಇಂಡಿಯನ್ ಆರ್ಮಿಯ ಅತ್ಯಂತ ನಂಬಿಕೆಯ ಏರ್‌ಕ್ರಾಫ್ಟ್ ತೇಜಸ್ ಇದೇ ಮೊದಲ ಬಾರಿಗೆ ಪತನವಾಗಿದೆ. ರಾಜಸ್ಥಾನದ ಜೈಸಲ್ಮೇರ್‌ನಲ್ಲಿರುವ ವಿದ್ಯಾರ್ಥಿ ಹಾಸ್ಟೆಲ್ ಬಳಿ ನೆಲಕ್ಕೆ ಬಿದ್ದು ಬೆಂಕಿಯಿಂದ ಧಗ ಧಗ ಹೊತ್ತಿ ಉರಿದಿದೆ. ಕಟ್ಟಡದ ಹಿಂದಿನ ಗೋಡೆಗೆ ಬಿದ್ದಿದ್ದರಿಂದ ಭಾರೀ ಅನಾಹುತವೊಂದು ತಪ್ಪಿದೆ ಎಂದು ಹೇಳಲಾಗಿದೆ.

ಭಾರತೀಯ ವಾಯುಪಡೆಯು ತರಬೇತಿ ನೀಡುವಾಗ ಈ ಅವಘಡ ಸಂಭವಿಸಿದೆ. ಘಟನೆಯಲ್ಲಿ ಪೈಲಟ್ ಸುರಕ್ಷಿತವಾಗಿದ್ದು ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ತೇಜಸ್ ವಿಮಾನವು 23 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಪತನಗೊಂಡಿದೆ. ತೇಜಸ್ ನೆಲಕ್ಕೆ ಅಪ್ಪಳಿಸುತ್ತಿದ್ದಂತೆ ಬೆಂಕಿ ಹೊತ್ತಿಕೊಂಡು ಧಗ ಧಗ ಹೊತ್ತಿ ಉರಿದಿದ್ದು ಸಂಪೂರ್ಣ ಸುಟ್ಟು ಕರಕಲಾಗಿದೆ. ಈ ಬಗ್ಗೆ ತನಿಖೆ ಮಾಡಲಾಗುತ್ತದೆ ಎಂದು ಭಾರತದ ವಾಯುಪಡೆಯ ಅಧಿಕಾರಿಗಳು ಎಕ್ಸ್‌ನಲ್ಲಿ ತಿಳಿಸಿದ್ದಾರೆ ಎನ್ನಲಾಗಿದೆ.

ತೇಜಸ್ ವಿಮಾನ 2001ರಲ್ಲಿ ಮೊದಲ ಪರೀಕ್ಷಾ ಹಾರಾಟವನ್ನು ಮಾಡಿ ಯಶಸ್ಸು ಕಂಡಿತ್ತು. ಇದಾದ ಬಳಿಕ ತೇಜಸ್ ಅನ್ನು 2016 ರಲ್ಲಿ ಭಾರತೀಯ ವಾಯುಪಡೆಗೆ ಸೇರಿಸಿಕೊಳ್ಳಲಾಯಿತು. ಅಂದಿನಿಂದ ಇಂದಿನವರೆಗೆ ತೇಜಸ್ ಏರ್‌ಕ್ರಾಫ್ಟ್ ಯಾವುದೂ ಕ್ರ್ಯಾಶ್ ಆಗಿರಲಿಲ್ಲ. ಆದ–'ರೆ ಇದೇ ಮೊದಲ ಬಾರಿಗೆ ತರಬೇತಿ ವೇಳೆ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಪತನವಾಗಿದೆ. ಅದೃಷ್ಟವಶಾತ್ ಯಾವುದೇ ಹಾನಿ ಸಂಭವಿಸಿಲ್ಲ ಎಂದು ತಿಳಿದು ಬಂದಿದೆ.

## ಬಿಜೆಪಿ ಲೋಕಸಭಾ ಎರಡನೇ ಪಟ್ಟಿ ರಿಲೀಸ್: ಹೊಸ ಮುಖಗಳಿಗೆ ಬಿಜೆಪಿ ಮಣೆ




ದೆಹಲಿ: ತೀವ್ರ ಕುತೂಹಲದ ನಡುವೆ ಬಿಜೆಪಿ ಲೋಕಸಭಾ ಎರಡನೇ ಪಟ್ಟಿ ಪ್ರಕಟವಾಗಿದ್ದು, ಕರ್ನಾಟಕದ 28 ಕ್ಷೇತ್ರಗಳ ಪೈಕಿ 20 ಕ್ಷೇತ್ರಗಳಿಗೆ ಅಭ್ಯರ್ಥಿಯನ್ನು ಘೋಷಣೆ ಮಾಡಲಾಗಿದೆ. ಅದರಲ್ಲೂ ಮುಖ್ಯವಾಗಿ ಹಲವು ಹಾಲಿ ಸಂಸದ–ರಿಗೆ ಟಿಕೆಟ್ ಮಿಸ್ ಆಗಿದ್ದು, ಹೊಸ ಮುಖಗಳಿಗೆ ಮಣೆ ಹಾಕಿದೆ. ಒಟ್ಟು ಎಂಟು ಹಾಲಿ ಸಂಸದರಿಗೆ ಟಿಕೆಟ್ ಮಿಸ್ ಆಗಿದ್ದು, ಆರು ಹೊಸ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಇದರಿಂದ ಘಟಾನುಘಟಿ ನಾಯಕರುಗಳಿಗೆ ಹೈಕಮಾಂಡ್ ಬಿಗ್ ಶಾಕ್ ಕೊಟ್ಟಿದೆ. ಚಿಕ್ಕೋಡಿಯಿಂದ ಹಾಲಿ ಸಂಸದ ಅಣ್ಣಾಸಾಹೇಜ ಜೊಲ್ಲೆ ಅವರಿಗೆ ಟಿಕೆಟ್ ನೀಡಲಾಗಿದೆ. ಬೆಳಗಾವಿ ಲೋಕಸಭಾ ಕದಕ ಕಲಿಯ ಹೆಸರು ನಿಗೂಡವಾಗಿದೆ ಉಳಿದುಕೊಂಡಿದೆ. ಒಟ್ಟು 28 ಕ್ಷೇತ್ರಗಳಲ್ಲಿ ಮೂರು ಕ್ಷೇತ್ರವನ್ನು ಜೆಡಿಎಸ್ಗೆ ಬಿಟ್ಟುಕೊಟ್ಟಿದ್ದು, ಇನ್ನುಳಿದ 25 ಕ್ಷೇತ್ರಗಳ ಪೈಕಿ ಈಗ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಲಾಗಿದೆ. ಇನ್ನುಳಿದಂತೆ ಐದು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಿಲ್ಲ. ರಾಯಚೂರು, ಚಿತ್ರದುರ್ಗ, ಬೆಳಗಾವಿ, ಚಿಕ್ಕಬಳ್ಳಾಪುರ, ಉತ್ತರ ಕನ್ನಡ ಕ್ಷೇತ್ರಗಳ ಟಿಕೆಟ್ ಕಾಯ್ದಿರಿಸಿದೆ.

## ಶುಭಂ ಶೆಳಕೆ ಬಂಧನ

ಬೆಳಗಾವಿ: ಕನ್ನಡ–ಮರಾಠಿ ಭಾಷೆಗಳ ನಡುವೆ ವಿಷ ಬೀಜ ಬಿತ್ತುತ್ತಿರುವ ಆರೋಪದ ಮೇರೆಗೆ ಎಂಇ–ಎಸ್ ಮುಖಂಡ ಶುಭಂ ಶೆಳಕೆಯನ್ನು ಮಾರ್ಕೆಟ್ ಪೊಲೀಸರು ವ'ಂ ೧ ಗ' ಳ' ವಾ ರ' ಬಂಧಿಸಿದ್ದಾರೆ.



ಈಗಾಗಲೇ ಶೆಳಕೆ ಮೇಲೆ ಖಡೇ ಬಜಾರ್, ಕ್ಯಾಂಪ್, ಮಾರ್ಕೆಟ್ ಸೇರಿದಂತೆ ವಿವಿಧ ಪೊಲೀಸ್ ಠಾಣೆಗಳಲ್ಲಿ ಭಾಷಾದ್ವೇಷಕ್ಕೆ ಸಂಬಂಧಿಸಿ ಪ್ರಕರಣ ದಾಖಲಾಗಿತ್ತು. ಈ ನಡುವೆ ಶೆಳಕೆ ಮೊನ್ನೆಯಷ್ಟೇ ಉದ್ಯಮಿಯೊಬ್ಬರ ನಾಮಫಲಕದಲ್ಲಿ ಜೈ ಮಹಾರಾಷ್ಟ್ರ ಎಂದು ಬರೆದು ಭಾಷಾದ್ವೇಷಕ್ಕೆ ಕಾರಣನಾಗಿದ್ದನ್ನು ಇಲ್ಲಿ ನೆನಪಿಸಬಹುದು.

# ಸಿಎಎ ಅಧಿಸೂಚನೆ ಹೊರಡಿಸಿರುವುದು 'ಗಿಮಿಕ್', ಸಚಿವ ಸಂಪುಟ ಸಭೆಯಲ್ಲಿ ಚರ್ಚೆ: ಸಿಎಂ ಸಿದ್ದರಾಮಯ್ಯ

ಉಡುಪಿ: ಕೇಂದ್ರ ಸರ್ಕಾರವು ಪೌರತ್ವ (ತಿದ್ದುಪಡಿ) ಕಾಯ್ದೆಯ ಅಧಿಸೂಚನೆ ಹೊರಡಿಸಿರುವುದು ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮಾಡಿರುವ 'ಗಿಮಿಕ್' ಆಗಿದ್ದು, ಕರ್ನಾಟಕದಲ್ಲಿ ಅದರ ಅನುಷ್ಠಾನದ ಬಗ್ಗೆ ರಾಜ್ಯ ಸರ್ಕಾರ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಹೇಳಿದ್ದಾರೆ.

ಕೇಂದ್ರವು ಸೋಮವಾರ ಪೌರತ್ವ (ತಿದ್ದುಪಡಿ) ಕಾಯ್ದೆ, 2019 ರ ಅನುಷ್ಠಾನವನ್ನು ಘೋಷಿಸಿತು. ವಿವಾದಾತ್ಮಕ ಕಾನೂನನ್ನು ಅಂಗೀಕರಿಸಿದ ನಾಲ್ಕು ವರ್ಷಗಳ ಅನುಷ್ಠಾನಗೊಳಿಸುತ್ತಿದ್ದು, ಪಾಕಿಸ್ತಾನ,



ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನದಿಂದ ದೇಶಕ್ಕೆ ಬಂದಿರುವ ಮುಸ್ಲಿಮೇತರ ವಲಸಿಗರಿಗೆ ಪೌರತ್ವ ನೀಡುತ್ತದೆ.

'ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಈಗ ಸಿಎಎ ಅನ್ನು ಜಾರಿಗೆ ತರಲಾಗುತ್ತಿದೆ. ಅವರು (ಕೇಂದ್ರ) ಇಷ್ಟು ವರ್ಷ ಏಕೆ ಮೌನವಾಗಿದ್ದರು? ಈಗ ಅವರು ಚುನಾವಣೆಗೆ ಮುಂಚಿತವಾಗಿ ಇದ್ದಕ್ಕಿದ್ದಂತೆ ಅದನ್ನು ತಂದಿದ್ದಾರೆ. ಚುನಾವಣೆಯಲ್ಲಿ ಸೋಲುವ ಭಯದಿಂದ ಈ ಎಲ್ಲ ಗಿಮಿಕ್‌ಗಳನ್ನು ಮಾಡುತ್ತಿದ್ದಾರೆ' ಎಂದು ಸಿದ್ದರಾಮಯ್ಯ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ನಾವು ಅದನ್ನು ಇನ್ನೂ ಪರಿಶೀಲಿಸಬೇಕಾಗಿದೆ. ಅದನ್ನು ಪರಿಶೀಲಿಸಿದ ನಂತರ ನಾವು ನಿರ್ಧಾರ ತೆಗೆದುಕೊಳ್ಳುತ್ತೇವೆ. ನಾವು ನಾಳೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸುತ್ತೇವೆ' ಎಂದರು.

## ಸಂವಿಧಾನ ಬದಲಿಸಲು ಯಾರಿಂದಲೂ ಸಾಧ್ಯವಿಲ್ಲ: ಸಚಿವ ಬಿ.ನಾಗೇಂದ್ರ

ರಾಯಚೂರು: ಸಂಸದ ಅನಂತ ಕುಮಾರ್ ಹೆಗಡೆ ಮೂರ್ಖತನದ ಮಾತುಗಳನ್ನು ಆಡುತ್ತಾರೆ. ಸಂವಿಧಾನ ಬದಲಿಸುತ್ತೇವೆ ಎಂದು ಹೇಳುವ ಸಂಸದರನ್ನು ಆ ಕ್ಷೇತ್ರ ಜನ ಹೇಗೆ ಗೆಲ್ಲಿಸಿದ್ದಾರೋ ಗೊತ್ತಿಲ್ಲ ಎಂದು ಸಚಿವ ಬಿ.ನಾಗೇಂದ್ರ ಹೇಳಿದರು.



ಮಂಗಳವಾರ ಮಂತ್ರಾಲಯದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಸಂವಿಧಾನ ಇದ್ದದ್ದಕ್ಕೆ ನಾನು ಶಾಸಕ, ಮಂತ್ರಿಯಾಗಿದ್ದೇನೆ. ಪ್ರಧಾನಿ ಮೋದಿ ಅವರು ಸಹ ಸಂವಿಧಾನದಿಂದಲೇ ನಾನು ಪ್ರಧಾನಿಯಾಗಿದ್ದೇನೆ ಅಂತ ಹೇಳುತ್ತಾರೆ ಎಂದರು.

ಆದರೆ, ಅವರ ಪಕ್ಷದ ಸಂಸದ ಗೆದ್ದು ಬಂದ ಕೂಡಲೇ ಸಂವಿಧಾನ ಬದಲಿಸುತ್ತೇವೆ ಅಂತಾರೆ. ಸಂವಿಧಾನವನ್ನು ಬದಲಿಸಲು ಯಾರಿಂದಲೂ ಸಾಧ್ಯವಿಲ್ಲ. ಇಂತಹ ಮೂರ್ಖರು ಎಷ್ಟು ಹೇಳಿದರು ಬದಲಾಗಲ್ಲ ಎಂದು ಹೇಳಿದರು.

ಸೂರ್ಯ, ಚಂದ್ರ ಸಾಕ್ಷಿಯಾಗಿ ಹೇಳ್ತೇನೆ, ಸಂವಿಧಾನ ಯಾರ ಕೈಯಿಂದ ಬದಲಿ ಮಾಡೋಕೆ ಸಾಧ್ಯವಿಲ್ಲ ಇಂಥ ಮೂರ್ಖರು ಎಷ್ಟು ಹೇಳಿದರೂ ಬದಲಾಗಲ್ಲ. ಅವರ ವಿರುದ್ಧ ರಾಜ್ಯದಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ ಅವರ ವಿರುದ್ಧ ರಾಜ್ಯದಲ್ಲಿ, ಅವರ ಕ್ಷೇತ್ರದಲ್ಲೂ ಗೋ ಬ್ಯಾಕ್ ಅನ್ನೋ ಪರಿಸ್ಥಿತಿ ಬರುತ್ತೆ ಎಂದರು

ಸಂವಿಧಾನ ಬದಲಾದರೆ ರಕ್ತಪಾತವಾಗುತ್ತೆ ಎನ್ನುವ ಸಿಎಂ ಸಿದ್ದರಾಮಯ್ಯ ಹೇಳಿಕೆ. ಸಂವಿಧಾನ ಇಲ್ಲದಿದ್ದರೆ ನೂರಕ್ಕೆ ನೂರರಷ್ಟು ರಕ್ತಪಾತವಾಗುತ್ತದೆ. ಸಂವಿಧಾನ ಬಿಟ್ಟು ನಡೆದುಕೊಳ್ಳುವುದಾದರೆ ನಮಗೆ ವಾಕ್ ಸ್ವಾತಂತ್ರ್ಯಯವೂ ಇರುವುದಿಲ್ಲ ಎಂದು ತಿಳಿಸಿದರು.

ಅನಂತ ಕುಮಾರ್ ಹೆಗಡೆ ಹೇಳಿಕೆ ವೈಯಕ್ತಿಕ, ಪಕ್ಷಕ್ಕೆ ಸಂಬಂಧವಿಲ್ಲ ಅಂತ ರಾಮುಲು ಹೇಳಿಕೆ ವಿಚಾರವಾಗಿ ಮಾತನಾಡಿ, ರಾಮುಲು ಅವರಿಗೆ ರಾಜ್ಯದ ಪರಿಸ್ಥಿತಿ ಗಮನಿಸುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರು ಮಾಜಿ ಸಚಿವರು, ಪ್ರಭಾವಿ ಸಚಿವರಾಗಿ ಕೆಲಸ ಮಾಡಿ ಸೋತಿದ್ದಾರೆ. ಇಂಥ ಕೆಲಸ ಮಾಡಿಕೊಂಡೇ ಅವರು ಸೋತಿದ್ದಾರೆ. ಈ ಹೇಳಿಕೆ ಪಕ್ಷದ ಮೇಲೆ ಪರಿಣಾಮ ಖಂಡಿತ ಬಿದ್ದೇ ಬೀಳತ್ತೆ. ಸಂವಿಧಾನದ ಪರ 80 ಇದ್ದಾರೆ. ಸಂವಿಧಾನದ ವಿರೋಧಿಗಳು ಒಂದು ಪರ್ಸೆಂಟ್ ಇದ್ದಾರೆ. ಅಂಬೇಡ್ಕರ್ ಸಂವಿಧಾನ ಬದಲಿ ಮಾಡೋಕೆ ಇವರಿಂದ ಏನು ಆಗಲ್ಲ ಎಂದರು.

## ವಕೀಲನಿಗೆ ಚಾಕು ಇರಿತ: ಆರೋಪಿ ಬಂಧನ

ಬೆಂಗಳೂರು: ಪೊಲೀಸ್ ಠಾಣೆಯ ಎದುರು ಆರೋಪಿ ಒಬ್ಬ ವಕೀಲನೆಗೆ ಚಾಕು ಇರಿಗಿರುವ ಘಟನೆ ಬೆಂಗಳೂರು ಜಿಲ್ಲೆಯ ಆನೇಕಲ್ ತಾಲೂಕಿನಲ್ಲಿ ನಡೆದಿದೆ.

ತಕ್ಷಣ ಗಾಯಗೊಂಡ ವಕೀಲರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಪೊಲೀಸ್ ಠಾಣೆಯ ಸಮೀಪವೆ ವಕೀಲನೆಗೆ ಚಾಕು ಇರಿದಿರುವ ಘಟನೆ ನಡೆದಿದ್ದು, ವಕೀಲ ಮಂಜುನಾಥ್ ಎನ್ನುವವರಿಗೆ ಬೆನ್ನು ಹಾಗೂ ಕೈಗೆ ಮೂರು ಬಾರಿ ಚಾಕು ಇರಿದಿರುವ ಘಟನೆ ನಡೆದಿದೆ.

ಈ ವೇಳೆ ನೆರವಿಗೆ ಧಾವಿಸಿದ ಆಟೋ ಡ್ರೈವರ್ ಮೇಲು ಕೂಡ ಹಲ್ಲೆಗೆ ಯತ್ನಿಸಿರುವ ಘಟನೆ ನಡೆದಿದೆ. ತಕ್ಷಣ ಆರೋಪಿಯನ್ನು ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ವಕೀಲ ಮಂಜುನಾಥ್ ಗೆ ಆನೇಕಲ್ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಆದರೆ ಘಟನೆಗೆ ನಿಖರವಾದಂತ ಕಾರಣ ತಿಳಿದು ಬಂದಿಲ್ಲ ಘಟನೆ ಕುರಿತಂತೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ಹುಕ್ಕಾ ಬಾರ್ ಅಂಗಡಿಗಳ ಮೇಲೆ ಟಿಳಕವಾಡಿ ಪೊಲೀಸರು ದಾಳಿ: ಇಬ್ಬರು ಆರೋಪಿಗಳ ಬಂಧನ



ಬೆಳಗಾವಿ: ಕಾನೂನು ಬಾಹೀರವಾಗಿ ತಂಬಾಕು ಉತ್ಪನಗಳ ಹುಕ್ಕಾ ಬಾರ್ ಅಂಗಡಿಗಳ ಮೇಲೆ ಟಿಳಕವಾಡಿ ಪೊಲೀಸರು ದಾಳಿ ನಡೆಸಿ 2,56,600 ರೂ. ಮೌಲ್ಯದ ವಿವಿಧ ಕಂಪನಿಯ ಹುಕ್ಕಾ ಹಾಗೂ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಕಾನೂನು ಸುವ್ಯವಸ್ಥೆಯ ಡಿಸಿಪಿ ರೋಹನ್ ಜಗದೀಶ್ ಮಾರ್ಗದರ್ಶನದಲ್ಲಿ ಮಾಳಮಾರುತಿ, ಮಾರ್ಕೇಟ್ ಹಾಗೂ ಟಿಳಕವಾಡಿ ಪೊಲೀಸರು ಹುಕ್ಕಾ ಬಾರ್ ಮಳಿಗೆಯ ಮೇಲೆ ದಾಳಿ ಮಾಡಿದ್ದಾರೆ. ದಾಳಿಯ ವೇಳೆ 75,500 ರೂ. ಮೌಲ್ಯದ ವಿವಿಧ ಕಂಪನಿಯ 126 ಹುಕ್ಕಾಗಳು, 62 ಸಾವಿರ ಮೌಲ್ಯದ ವಿವಿಧ ಕಂಪನಿಯ 51 ರೋಲ್ ಪೇಪರ್, 15,500 ರೂ. ಮೌಲ್ಯದ 30 ವಿವಿಧ ಕಂಪನಿಯ ಚಾರ್ಕೋಲ್, 20,300 ರೂ. ಮೌಲ್ಯದ ವಿವಿಧ ಕಂಪನಿಯ 120 ಬಾಂಗ್ ಪೈಪ್ ಗಳು, 41,500 ರೂ. ಮೌಲ್ಯದ 25 ಪಾಕೀಟ್ ವಿದೇಶಿ ಸಿಗರೆಟ್, 25,300 ರೂ. ಮೌಲ್ಯದ ವಿವಿಧ ಕಂಪನಿಯ ತಂಬಾಕಿನ ಪಾಕೆಟ್ ಸೇರಿದಂತೆ 16, 500 ರೂ. ಮೌಲ್ಯದ ವಿವಿಧ ಕಂಪನಿಯ ಫ್ಲೇವರ್ಸ್ ಪಾಕೆಟ್ ಗಳು ಒಟ್ಟು 2,56,600ಮೌಲ್ಯದ ಸ್ವತ್ತನ್ನು ವಶಪಡಿಸಿಕೊಂಡು, ಮಂಗಳೂರು ಮೂಲದ ಅನಗೋಳದ ರಹವಾಸಿಗಳಾದ ಅಬುಬಕ್ಕರ ಜೈನಾಭಾ ಸಿದ್ಧಿಕ್ (31) ಹಾಗೂ ಶಬಾಬ್ ಶಕೀಲ್ ಅಹ್ಮದ (22) ಆರೋಪಿಯನ್ನು ಬಂಧಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಎಸಿಪಿ ಸದಾಶಿವ ಕಟ್ಟಿಮನಿ, ಕಪೀಲ್ ದೇವ ಭಾಗವಹಿಸಿದ್ದರು.

## ರಾಜ್ಯ ಸರ್ಕಾರಿ ನೌಕರರಿಗೆ ಸಿಹಿ ಸುದ್ದಿ: ತುಟ್ಟಿಭತ್ಯೆ ಹೆಚ್ಚಳಕ್ಕೆ ಅನುಮೋದನೆ

ಬೆಂಗಳೂರು: ಕರ್ನಾಟಕ ಸರ್ಕಾರವು ರಾಜ್ಯ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆಯನ್ನು ಶೇಕಡಾ 38.75 ರಿಂದ ಶೇಕಡಾ 42.5 ಕ್ಕೆ ಪರಿಷ್ಕ–ರಿಸಲು ಅನುಮೋದಿಸಿದೆ.

ಕೇಂದ್ರೀಯ ವೇತನ ಶ್ರೇಣಿಯಲ್ಲಿರುವವರಿಗೆ ಇದು 46% ರಿಂದ 50% ಕ್ಕೆ ಏರಿದೆ. ಈ ಬದಲಾವಣೆಯು ಪ್ರತಿ ವರ್ಷ 1792.71 ಕೋಟಿ ರೂಪಾಯಿಗಳ ಗಮನಾರ್ಹ ಆರ್ಥಿಕ ಬದ್ಧತೆಯನ್ನು ಪ್ರತಿನಿಧಿಸುತ್ತದೆ. ನಮ್ಮ ಉದ್ಯೋಗಿಗಳಿಗೆ ನಮ್ಮ ಸಮರ್ಪಣೆಯನ್ನು ಪುನರುಚ್ಚರಿಸುತ್ತದೆ ಎಂದು ಸಿಎಂ ಕಚೇರಿ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದೆ.

2018ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನವನ್ನು ಪಡೆಯುತ್ತಿರುವ ರಾಜ್ಯ ಸರ್ಕಾರಿ ನೌಕರರಿಗೆ 2024ರ ಜನವರಿ 1ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆಯ ದರಗಳನ್ನು ಪ್ರಸ್ತುತ ಮೂಲ ವೇತನದ ಶೇಕಡಾ 38.75 ರಿಂದ ಶೇಕಡಾ 42.5ಕ್ಕೆ ಪರಿಷ್ಕರಿಸಿ ಮಂಜೂರು ಮಾಡಲು ಸರ್ಕಾರವು ಹರ್ಷಿಸುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ತುಟ್ಟಿಭತ್ಯೆಯ ಉದ್ದೇಶಕ್ಕಾಗಿ 'ಮೂಲ ವೇತನ' ಎಂದರೆ ಸರ್ಕಾರಿ ನೌಕರನು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವ ವೇತನ ಶ್ರೇನಿಯಲ್ಲಿ ಪಡೆಯುತ್ತಿರುವ ವೇತನ ಮತ್ತು ಅದರಲ್ಲಿ, 1) ವೇತನ ಶ್ರೇಣಿಯ ಗರಿಷ್ಠಕ್ಕಿಂತ ಹೆಚ್ಚಾಗಿ ಅವನಿಗೆ ಸ್ಥಗಿತ ವೇತನ ಬಡ್ತಿಯನ್ನು ನೀಡಲಾಗಿದ್ದರೆ, ಆ ಸ್ಥಗಿತ ವೇತನ ಬಡ್ತಿ. 2) 2018ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 3(ಸಿ) ಯನ್ನು ಓದಿಕೊಂಡು 7ನೇ ನಿಯಮದ (3ನೇ) ಉಪನಿಯಮದ ಮೇರೆಗೆ ಅವನಿಗೆ ನೀಡಲಾದ ವೈಯಕ್ತಿಕ ವೇತನ ಯಾವುದಾದರೂ ಇದ್ದರೆ ಆ ವೈಯಕ್ತಿಕ ವೇತನ, 3) ವೇತನ ಶ್ರೇಣಿಯ ಗರಿಷ್ಠಕ್ಕಿಂತ ಹೆಚ್ಚಾಗಿ ಅವನಿಗೆ ಮಂಜೂರು ಮಾಡಲಾಗಿರುವ ಹೆಚ್ಚುವರಿ ವೇತನ ಬಡ್ತಿ ಯಾವುದಾದರೂ ಇದ್ದಲ್ಲಿ ಅವುಗಳು ಸೇರುತ್ತವೆ.

## ಸದಾನಂದ ಗೌಡರಿಗೆ ಕಾಂಗ್ರೆಸ್ ಗೆ ಆಹ್ವಾನ: ಡಿಕೆಶಿ ಅಚ್ಚರಿಯ ಹೇಳಿಕೆ



ಬೆಂಗಳೂರು: ಮಾಜಿ ಸಿಎಂ ಡಿವಿ ಸದಾನಂದ ಗೌಡ ಅವ–ರಿಗೆ ಒಂದೆಡೆ ಬಿಜೆಪಿಯಿಂದ ಲೋಕಸಭೆ ಚುನಾವಣೆಗೆ ಟಿಕೆಟ್ ದೊರೆಯುತ್ತದೆಯೇ ಎಂಬ ಅನುಮಾನ ಸೃಷ್ಟಿಯಾಗಿದೆ.

ಈ ಮಧ್ಯೆ, ಅವರು ಕಾಂಗ್ರೆಸ್ ಸೇರುವ ಸಾಧ್ಯತೆಗಳೂ ಇವೆ ಎಂಬ ವದಂತಿಯೂ ಇದೆ. ಈ ಎಲ್ಲ ಬೆಳವಣಿಗೆಗಳ ಮಧ್ಯೆ ಸದಾನಂದ ಗೌಡ ವಿಚಾರವಾಗಿ ಡಿಸಿಎಂ ಡಿಕೆ ಶಿವಕುಮಾರ್ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಸೇರುವ ವಿಚಾರವಾಗಿ ಬಹಳಷ್ಟು ಜನ ನಮ್ಮನ್ನು ಬೇಟಿಯಾಗಿದ್ದಾರೆ ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ.

ಕಲಬುರಗಿಯಲ್ಲಿ ಮಾತನಾಡಿದ ಡಿಕೆ ಶಿವಕುಮಾರ್, ಅನೇಕ ಜನ ಪಕ್ಷ ಸೇರ್ಪಡೆ ವಿಚಾರವಾಗಿ ನಮ್ಮನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಜಯಪ್ರಕಾಶ್ ಹೆಗ್ಡೆ, ಎಂಪಿಕೆ ನಮ್ಮ ಪಕ್ಷ ಸೇರಿದ್ದಾರೆ. ಇನ್ನೂ ಬಹಳ ಜನ ಪಕ್ಷಕ್ಕೆ ಬರುವವರಿದ್ದಾರೆ. ಅದರಲ್ಲಿ ಹಾಲಿ ಬಿಜೆಪಿ ಎಂಪಿಗಳು ಕೂಡ ಇದ್ದಾರೆ. ಈಗ ಅವರ ಹೆಸರು ಬಹಿರಂಗ ಪಡಿಸುವುದಿಲ್ಲ ಎಂದು ಹೇಳಿದ್ದಾರೆ.

ಸದಾನಂದ ಗೌಡರನ್ನು ಕಾಂಗ್ರೆಸ್ ಪಕ್ಷಕ್ಕೆ ಆಹ್ವಾನಿಸಿದ್ದೀರಾ ಎಂಬ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಡಿಕೆ ಶಿವಕುಮಾರ್, ಅವರು ಪಕ್ಷಕ್ಕೆ ಬಂದರೆ ಸ್ವಾಗತ ಎಂದು ಹೇಳಿದ್ದಾರೆ.

## ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ: ಜೊಲ್ಲೆಗೆ ಟಿಕೆಟ್ ಫೈನಲ್

ನವದೆಹಲಿ: ಲೋಕಸಭಾ ಚುನಾವಣೆಗೆ ಭಾರತೀಯ ಜನತಾಪಾರ್ಟಿಯ 2ನೇ ಪಟ್ಟಿ ಬಿಡುಗಡೆಯಾಗಿದೆ.

ಚಿಕ್ಕೋಡಿ –ಅಣ್ಣಾ ಸಾಹೇಬ ಜೊಲ್ಲೆ
ಬಾಗಲಕೋಟಿ – ಪಿ.ಸಿ ಗದ್ದಿಗೌಡರ
ವಿಜಯಪುರ –ರಮೇಶ ಜಿಗಜಿಣಗಿ
ಗುಲಬರ್ಗಾ– ಉಮೇಶ ಜಾಧವ
ಬೀದರ್ – ಭಗವಂತ ಖೂಬಾ
ಕೊಪ್ಪಳ – ಬಸವರಾಜ
ಬಳ್ಳಾರಿ – ಶ್ರೀರಾಮುಲು
ಹಾವೇರಿ – ಬಸವರಾಜ ಬೊಮ್ಮಾಯಿ
ಧಾರವಾಡ – ಪ್ರಹ್ಲಾದ ಜೋಶಿ
ದಾವಣಗೆರೆ – ಗಾಯತ್ರಿ ಸಿದ್ದೇಶ್ವರ
ಶಿವಮೊಗ್ಗ – ಬಿ.ವೈ. ರಾಘವೇಂದ್ರ
ಉಡುಪಿ –ಚಿಕ್ಕಮಗಳೂರು – ಕೋಟಾ ಶ್ರೀನಿವಾಸ ಪೂಜಾರಿ
ದಕ್ಷಿಣ ಕನ್ನಡ – ಕ್ಯಾ. ಬ್ರಿಜೆಶ ಚೌಟ
ತುಮಕೂರು – ವಿ.ಸೋಮಣ್ಣ
ಮೈಸೂರು – ಯದುವೀರ ಒಡೆಯರ್
ಚಮರಾಜ ನಗರ – ಎಸ್.ಬಾಲರಾಜ
ಬೆಂಗಳೂರು ಗ್ರಾಮೀಣ – ಡಾ.ಸಿ.ನ್. ಮಂಜುನಾಥ
ಬೆಂಗಳೂರು ಉತ್ತರ – ಶೋಭಾ ಕರಂದ್ಲಾಜೆ
ಬೆಂಗಳೂರು ಕೇಂದ್ರ – ಪಿ.ಸಿ.ಮೋಹನ
ಬೆಂಗಳೂರು ದಕ್ಷಿಣ – ತೇಜಸ್ವಿ ಸೂರ್ಯ

## ಕಾಲೇಜು ವಿದ್ಯಾರ್ಥಿನಿಯರ ಮೇಲೆ ಆಸಿಡ್ ದಾಳಿ ಕೇಸ್; ಇನ್ನಿಬ್ಬರನ್ನು ವಶಕ್ಕೆ ಪಡೆದ ಪೊಲೀಸರು

ಮೂವರು ವಿದ್ಯಾರ್ಥಿನಿಯರ ಮೇಲೆ ಆಸಿಡ್ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಕ್ಷಣ ಕನ್ನಡ ಜಿಲ್ಲೆಯ ಕಡಬ ಪೊಲೀಸರು ಮತ್ತೆ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

ಮಾರ್ಚ್ 5ರಂದು ಕಡಬ ಸರ್ಕಾರಿ ಕಾಲೇಜಿನ ಆವರಡಲ್ಲಿ ಮೂವರು ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರ ಮೇಲೆ ದುಷ್ಕರ್ಮಿ ಆಸಿಡ್ ದಾಳಿ ನಡೆಸಿದ್ದ. ಪ್ರಕರಣ ಸಂಬಂಧ ಪ್ರಮುಖ ಆರೋಪಿ ಕೇರಳ ಮೂಲದ ಎಂಬಿಎ ವಿದ್ಯಾರ್ಥಿ ಅಭಿನ್ ಎಂಬಾತನನ್ನು ಪೊಲೀಸರು ಬಂಧಿಸಿದ್ದರು.

ತನಿಖೆ ಮುಂದುವರೆಸಲಾಗಿತ್ತು. ಇದೀಗ ಇದೇ ಪ್ರಕರಣದಲ್ಲಿ ಕೇರಳ ಮೂಲದ ಮತ್ತಿಬರು ಆರೋಪಿಗಳನ್ನು ಕಡಬ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆರೋಪಿಗೆ ಆಸಿಡ್ ತಂದುಕೊಟ್ಟಿದ್ದ ವ್ಯಕ್ತಿ ಹಾಗೂ ಆಸಿಡ್ ದಾಳಿ ನಡೆದ ದಿನ ಕಾಲೇಜಿನ ಸಮವಸ್ತ್ರ ಹೋಲುವ ಬಟ್ಟೆಯನ್ನು ಹೊಲಿದು ಆರೋಪಿಗೆ ಕೊಟ್ಟ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆರೋಪಿ ಆಸಿಡ್ ನ್ನು ಆಲ್ ಲೈನ್ ನಲ್ಲಿ ಖರೀದಿಸಿರುವ ಶಂಕೆ ವ್ಯಕ್ತವಾಗಿದೆ.

ಇನ್ನು ಆಸಿಡ್ ದಾಳಿಯಲ್ಲಿ ಗಂಭಿರವಾಗಿ ಗಾಯಗೊಂಡಿರುವ ಮೂವರು ವಿದ್ಯಾರ್ಥಿನಿಯರಿಗೆ ಮಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ.

# ಗ್ಯಾರಂಟಿ ಯೋಜನೆಗಳು ನಿಲ್ಲೋದಿಲ್ಲ; ಬಿಜೆಪಿಯಿಂದ ಅನಾವಶ್ಯಕ ಅಪಪ್ರಚಾರ

## ಗ್ಯಾರಂಟಿ ಯೋಜನೆಗಳ ಸಮಾವೇಶದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿಕೆ

ಉಡುಪಿ: ಕರ್ನಾಟಕ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳನ್ನು ಕೇವಲ ಪ್ರಚಾರಕ್ಕಾಗಿ ಜಾರಿಗೆ ತಂದಿಲ್ಲ. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಆರ್ ಹೆಬ್ಬಾಳ್ಕರ್ ಹೇಳಿದ್ದಾರೆ.

ಉಡುಪಿಯ ಕುಂಜಿಬೆಟ್ಟುವಿನ ಲಕ್ಷ್ಮೀ ನಾರಾಯಣ ರಾವ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಗ್ಯಾರಂಟಿ ಯೋಜನೆಗಳ ಸಮಾವೇಶ ಹಾಗೂ ಜಿಲ್ಲೆಯ ವಿವಿಧ ಕಾಮಗಾರಿಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸಚಿವರು, ಗ್ಯಾರಂಟಿ ಯೋಜನೆಗಳ ಬಗ್ಗೆ ವಿರೋಧ ಪಕ್ಷಗಳು ಅನಾವಶ್ಯಕವಾಗಿ ಟೀಕೆ ಮಾಡುತ್ತಿವೆ ಎಂದು ಕಿಡಿ ಕಾರಿದರು.

ರಾಜ್ಯದ ಜನತೆಯ ಅಭೂತಪೂರ್ವ ಆಶೀರ್ವಾದದಿಂದ ಆಡಳಿತಕ್ಕೆ ಬಂದ ನಮ್ಮ ಸರ್ಕಾರವು ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳು ರಾಜ್ಯದ ಜನತೆಯ ಸಂಜೀವಿನಿಯಾಗಿವೆ.

ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ, ಐದಕ್ಕೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ನಮ್ಮ ಸರ್ಕಾರವು ನುಡಿದಂತೆ ನಡೆದಿದೆ ಎಂದು ಹೇಳಿದರು.

ಈಗ ದೇಶವೇ ನಮ್ಮ ರಾಜ್ಯದತ್ತ ನೋಡುತ್ತಿದೆ. ಇತರೆ ರಾಜ್ಯಗಳಿಗೆ ನಮ್ಮ ಸರ್ಕಾರವು ಮಾದರಿಯಾಗಿದೆ. ನಮ್ಮ ಸರ್ಕಾರದಂತೆಯೇ ಅಲ್ಲಿಯೂ ಗ್ಯಾರಂಟಿ ಯೋಜನೆಗಳನ್ನು ನೀಡುತ್ತಿದ್ದಾರೆ. ಮಹಿಳೆಯರನ್ನು ಸಶಕ್ತರನ್ನಾಗಿ ಮಾಡಲು ಈ ಯೋಜನೆಗಳನ್ನು ರೂಪಿಸಿದೆ. ತಾಯಂದಿರು, ಅಕ್ಕ ತಂಗಿಯರು ಗ್ಯಾರಂಟಿ ಯೋಜನೆಗಳಿಂದ ಬಹಳ ಸಂತುಷ್ಟರಾಗಿದ್ದಾರೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಜನಪರ ಕಾಳಜಿಯಿರುವ ಯೋಜನೆಗಳನ್ನೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಜಾರಿಗೊಳಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಇರುವವರೆಗೂ ನಮ್ಮ ಯೋಜನೆಗಳು ನಿಲ್ಲೋದಿಲ್ಲ. ಲೋಕಸಭಾ ಚುನಾವಣೆ ಬಳಿಕ ಗ್ಯಾರಂಟಿ ಯೋಜನೆಗಳನ್ನು ಇರೋದಿಲ್ಲ ಎಂದು ವಿರೋಧ ಪಕ್ಷಗಳು ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ. ಇಂಥ ಊಹಾಪೋಹಗಳಿಗೆ ಕಿವಿಗೊಡದೆ ಸರ್ಕಾರವನ್ನು ಬೆಂಬಲಿಸಿ ಎಂದು ಸಚಿವರು ಕೋರಿದರು.

ಬಿಜೆಪಿ ಕೇವಲ ಜನರ ಭಾವನೆಗಳನ್ನು ಕೆರಳಿಸುತ್ತದೆ, ಕಾಂಗ್ರೆಸ್ ಜನರ ಬದುಕಿಗೆ ಬೇಕಾದ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ನಮ್ಮ ಸರ್ಕಾರ ಎಂದೂ ದೇವರು–ಧರ್ಮದ ಹೆಸರಲ್ಲಿ ಮರಳು ಮಾಡಿ ಅಧಿಕಾರ ನಡೆಸುವುದಿಲ್ಲ ಎಂದರು. ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯವು ಇನ್ನಷ್ಟು ಅಭಿವೃದ್ಧಿಯತ್ತ ಸಾಗಲಿದೆ. ಇದು ಶತಸಿದ್ಧ ಎಂದರು.

**ಅಂಗನವಾಡಿ ಕಾರ್ಯಕರ್ತರಿಗೆ ಧನ್ಯವಾದ ಅರ್ಪಿಸಿದ ಸಚಿವೆ**

ನಮ್ಮ ಯೋಜನೆಗಳನ್ನ ಜನರಿಗೆ ತಲುಪಿಸುವಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಯಶಸ್ವಿಯಾಗಿದ್ದಾರೆ.

ಅವರಿಗೆ ವೈಯಕ್ತಿಕವಾಗಿ ಅನಂತ ಧನ್ಯವಾದಗಳು ಎಂದರು. ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳಿಗೆ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಹೇಳಿದರು.

**ಕರಾವಳಿ ಜಿಲ್ಲೆಗಳ ಅಭಿವೃದ್ಧಿಗೆ ಬದ್ಧ**

ಸಿದ್ದರಾಮಯ್ಯ ನವರು ಬಜೆಟ್‌ನಲ್ಲಿ ಮೀನುಗಾರಿಕೆಗೆ ಮೂರು ಸಾವಿರ ಕೋಟಿ ಅನುದಾನ ನೀಡಿದ್ದಾರೆ. ಇದು ಕರಾವಳಿ ಜಿಲ್ಲೆಗಳ ಮೇಲೆ ಸರ್ಕಾರಕ್ಕೆ ಇರುವ ಕಾಳಜಿ. ಮುಂದಿನ ದಿನಗಳಲ್ಲಿ ಈ ಜಿಲ್ಲೆಗಳ ಅಭಿವೃದ್ಧಿಗೆ ನಮ್ಮ ಸರ್ಕಾರ ಕಂಕಣ ಬದ್ಧವಾಗಿದೆ. ನಾನು ಈ ಜಿಲ್ಲೆಯ ಉಸ್ತುವಾರಿ ಸಚಿವೆಯಾಗಿರುವುದು ನನ್ನ ಪುಣ್ಯ ಎಂದು ಹೇಳಿದರು.

ಸಮಾರಂಭದಲ್ಲಿ ಮೀನುಗಾರಿಕೆ ಸಚಿವರಾದ ಮಂಕಾಳ ವೈದ್ಯ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಜಯಪ್ರಕಾಶ್ ಹೆಗ್ಡೆ, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಪುಷ್ಪ ಅಮರ್ ನಾಥ್, ಎಂಎಲ್ ಸಿ ಮಂಜುನಾಥ್ ಭಂಡಾರಿ, ಚಿಕ್ಕಮಗಳೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಅಂಶುಮಾನ್, ಗೇರು ಬೀಜ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಮತಾ ಗಟ್ಟಿ, ಮುಖಂಡರಾದ ವಿನಯ್ ಕುಮಾರ್ ಸೊರಕೆ, ಉದಯ್ ಕುಮಾರ್ ಶೆಟ್ಟಿ, ಪ್ರಸಾದ್ ಕಾಂಚನ್, ದಿನೇಶ್ ಹೆಗ್ಡೆ ಮೊಗಳಿ, ಸರ್ಕಾರದ ಕಾರ್ಯದರ್ಶಿಗಳಾದ ಡಾ. ಎಂ.ಟಿ.ರೇಣು, ಐಜಿಪಿ ಬೋರಲಿಂಗಯ್ಯ, ಜಿಲ್ಲಾಧಿಕಾರಿ ವಿದ್ಯಾಕುಮಾರಿ, ಪೊಲೀಸ್ ವ–ರಿಷ್ಠಾಧಿಕಾರಿ ಡಾ.ಅರುಣ್, ಜಿ.ಪಂ ಸಿಇಒ ಪ್ರತೀಕ್ ಬಾಯಲ್ ಉಪಸ್ಥಿತರಿದ್ದರು.

# ಮೋದಿಯವರ ನಾಯಕತ್ವದಲ್ಲಿ ಭಾರತ 'ಫ್ರಾಜೈಲ್ ಫೈವ್'ನಿಂದ ಜಗತ್ತಿನ ಟಾಪ್ ಫೈವ್ ಆರ್ಥಿಕತೆಯಾಗಿ ಹೊರಹೊಮ್ಮಿದೆ: ಅಮಿತ್ ಶಾ

ಬೆಳಗಾವಿ : ಮೋದಿಯವರ ನಾಯಕತ್ವದಲ್ಲಿ ಭಾರತ 'ಫ್ರಾಜೈಲ್ ಫೈವ್'ನಿಂದ ಜಗತ್ತಿನ ಟಾಪ್ ಫೈವ್ ಆರ್ಥಿಕತೆಯಾಗಿ ಹೊರಹೊಮ್ಮಿದೆ: ಅಮಿತ್ ಶಾ

ಮುಂಬೈ: ಕೇಂದ್ರ ಗೃಹ ಸಚಿವ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಬುಧವಾರ ಮುಂಬೈನಲ್ಲಿ ನಡೆದ ಇಂಡಿಂ-ಯಾ ಗ್ಲೋಬಲ್ ಫೋರಂನ ವಾರ್ಷಿಕ ಹೂಡಿಕೆ ಶೃಂಗಸಭೆ – NXT10 ಅನ್ನು ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ, 'ಮೋದಿ ನಾಯಕತ್ವದಲ್ಲಿ ಭಾರತ ದುರ್ಬಲ ಅರ್ಥಿಕತೆಯಿಂದ ವಿಶ್ವದ ಐದನೇ ಆರ್ಥಿಕತೆಯಾಗಿ ಹೊರಹೊಮ್ಮಿದೆ' ಎಂದು ಶಾ ಸುಸ್ಪಷ್ಟಪಡಿಸಿದರು.

2004 ರಿಂದ 2014 ರವರೆಗೆ ಕೇಂದ್ರದಲ್ಲಿ ಸೋನಿಯಾ–ಮನಮೋಹನ್ ಸರ್ಕಾರ ಅಧಿಕಾರದಲ್ಲಿದ್ದಾಗ ದೇಶದ ಆರ್ಥಿಕತೆಯು, ವಿಶ್ವದಲ್ಲಿ 11ನೇ ಸ್ಥಾನದಲ್ಲಿತ್ತು ಎಂಬುದು ಭಾರತದ ಪ್ರತಿಯೊಬ್ಬ ನಾಗರಿಕನಿಗೂ ತಿಳಿದಿದೆ. ಕಳೆದ 10 ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ದೇಶದ ಆರ್ಥಿಕತೆಯನ್ನು 5ನೇ ಸ್ಥಾನಕ್ಕೆ ತರುವ ಕಾರ್ಯ ಮಾಡಿದೆ.




ತಮ್ಮ ಮೂರನೇ ಅವಧಿಯಲ್ಲಿ ದೇಶದ ಆರ್ಥಿಕತೆಯನ್ನು ಮೋದಿಯವರು ಮೂರನೇ ಸ್ಥಾನಕ್ಕೆ ತರುವುದು ಖಚಿತ. 2014ರ ಹಿಂದಿನ 10 ವರ್ಷಗಳವರೆಗೆ ದೇಶದ ಆರ್ಥಿಕತೆಯ ಸ್ಥಿತಿ ಹದಗೆಟ್ಟಿತ್ತು, ಹೂಡಿಕೆದಾರರ ವಿಶ್ವಾಸ ಕುಸಿದಿತ್ತು, ಆದರೆ ಇಂದಿನ ಅಮೃತ ಕಾಲಘಟ್ಟದಲ್ಲಿ ದೇಶದ ಆರ್ಥಿಕತೆಯು ಬಲಿಷ್ಠವಾಗಿದೆ ಮತ್ತು ಭಾರತವು ಆತ್ಮ ವಿಶ್ವಾಸದಿಂದ ಎದ್ದುನಿಂತು ಸ್ವಾವಲಂಬಿಯಾಗಿದೆ

ಮೋದಿಯವರ ದೂರದೃಷ್ಟಿಯ ನಾಯಕತ್ವ ಮತ್ತು 'ಅಂತ್ಯೋದಯ' (ಕೊನೆಯ ಹಂತದ ವ್ಯಕ್ತಿಯ ಉನ್ನತಿ) ರಾಜಕಾರಣಕ್ಕೆ ಹೆಸರಾಗಿರುವ ಅಮಿತ್ ಶಾ ಅವರ ಮಾರ್ಗದರ್ಶನದಲ್ಲಿ ಕೇಂದ್ರ ಸರ್ಕಾರವು 'ನಿಷ್ಕ್ರಿಯ'ತೆಯಿಂದ ಎದ್ದು 'ಚಲನಶೀಲ'ವಾಗಿದೆ. 'ರಿಗ್ರೆಸಿವ್'ನಿಂದ 'ಪ್ರೊಗ್ರೆಸಿವ್'ಗೆ ಬದಲಾಗಿರುವ ಭಾರತದ ಆರ್ಥಿಕತೆಯು 'ದುರ್ಬಲ' ಸ್ಥಾನದಿಂದ ಅಗ್ರ ಸ್ಥಾನಕ್ಕೆ ತಲುಪಿದೆ. ಭಾರತವು ಈಗ ದುರ್ಬಲ ಐದು ಆರ್ಥಿಕತೆ ಹಣೆಪಟ್ಟಿಯಿಂದ ಹೊರಬಂದು, ಅಗ್ರ ಐದು ಆರ್ಥಿಕತೆಗಳ ಪಟ್ಟಿಕ್ಕೆ ತಲುಪಿದೆ. ಹೊಸ ಜಾಗತಿಕ ಭೂಪಟದಲ್ಲಿ ಭಾರತವು 'ಡಾರ್ಕ್ ಸ್ಪಾಟ್' ನಿಂದ 'ಬ್ರೈಟ್ ಸ್ಪಾಟ್' ಆಗಿ ಹೊರಹೊಮ್ಮಿದೆ. 10 ವರ್ಷಗಳಲ್ಲಿ ಸರ್ಕಾರವು ನೋಟು ಅಮಾನ್ಯೀಕರಣ, ಜಿಎಸ್ಟಿ, ಜನ್ ಧನ್, ತ್ರಿವಳಿ ತಲಾಖ್, ಹೊಸ ಶಿಕ್ಷಣ ನೀತಿ, ಸಿಎಎ, ವಿಧಿ 370 ಮತ್ತು 35 ಎ, ನಾರಿ ಶಕ್ತಿ ವಂದನ್ ಅಧಿನಿಯಮ್, ಮೂರು ಹೊಸ ಕಾನೂನುಗಳು, ರಾಮಮಂದಿರ ನಿರ್ಮಾಣ, ಹೊಸ ಸಂಸತ್ತಿನ ಕಟ್ಟಡ, ಕರ್ತಾಪುರ ಕಾರಿಡಾರ್ ನಿರ್ಮಾಣ, ಈಶಾನ್ಯ, ಕಾಶ್ಮೀರ ಮತ್ತು ಎಡಪಂಥೀಯ ಉಗ್ರವಾದದ ಮೇಲೆ ನಿಯಂತ್ರಣ, ಗೃಹೋಪಯೋಗಿ ವಿದ್ಯುತ್, ಅನಿಲ ಮತ್ತು ನೀರು, ರೂ 5 ಲಕ್ಷದವರೆಗೆ ಉಚಿತ ಚಿಕಿತ್ಸೆ, ರೈತರಿಗೆ ಆರ್ಥಿಕ ನೆರವು, ಸರ್ಜಿಕಲ್ ಸ್ಟ್ರೈಕ್, ವೈಮಾನಿಕ ದಾಳಿ ಮತ್ತು ಇನ್ನೂ ಅನೇಕ ನಿರ್ಧಾರಗಳು ಸೇರಿದಂತೆ 50 ಕ್ಕೂ ಹೆಚ್ಚು ಪರಿವರ್ತಕ ನಿರ್ಧಾರಗಳನ್ನು ತೆಗೆದುಕೊಂಡಿದೆ. ಇವು ಭಾರತಕ್ಕೆ ವಿಶ್ವದಲ್ಲಿ ಹೊಸ ಗುರುತನ್ನು ನೀಡಿದೆ.

ಇಂದಿನ ಅಮೃತ ಕಾಲಘಟ್ಟದಲ್ಲಿ, 2024ರ ಲೋಕಸಭೆ ಚುನಾವಣೆಯೂ ಸಮೀಪಿಸುತ್ತಿದೆ. ಮೋದಿ ಸರ್ಕಾರದ ಸಾಧನೆಗಳೊಂದಿಗೆ ಭಾರತೀಯ ರಾಜ–ಕಾರಣದ ಚಾಣಕ್ಯ ಚುನಾವಣಾ ಸಮರದಲ್ಲಿ ಪ್ರತಿಪಕ್ಷಗಳಿಗೆ ನಿರ್ಣಾಯಕ ಸೋಲು ನೀಡಲು ಮತ್ತೊಮ್ಮೆ ರಣರಂಗಕ್ಕೆ ಇಳಿದಿದ್ದಾರೆ.

ಕಳೆದ 10 ವರ್ಷಗಳ ಸಾಧನೆಯನ್ನು ಆಧರಿಸಿ ದೇಶದ ಜನತೆ ಮತ್ತೊಮ್ಮೆ ನರೇಂದ್ರ ಮೋದಿಯವರನ್ನು ಪ್ರಧಾನಿ ಮಾಡಲು ನಿರ್ಧರಿಸಿದೆ. ಶಾ ಚುನಾವಣಾ ಕಣಕ್ಕೆ ಇಳಿದರೆ ಕಮಲ ಅರಳುವುದು ಖಚಿತ ಎಂಬುದು ವಿರೋಧ ಪಕ್ಷಗಳಿಗೂ ಗೊತ್ತಿದೆ. ಯಾವುದೇ ಚುನಾವಣೆಯಲ್ಲಿ ಗೆಲುವು ಸಾಧಿಸಲು ಭಾರತೀಯ ಜನತಾ ಪಕ್ಷದ ಅಸಾಮಾನ್ಯ ನಾಯಕ ಶಾ ಅಸ್ತ್ರವೊಂದಿದ್ದರೆ ಸಾಕು.

# ತೀರದಾಸೆಯ ಬೆನ್ನೇರಿ ಶಾಂತಿಯ ಹುಡುಕಾಟ



ಮನುಷ್ಯನ ಬದುಕಿನಲ್ಲಿ ಈ ಶಾಂತಿ ನೆಮ್ಮದಿಗಾಗಿ ಇನ್ನಿಲ್ಲದ ಹುಡುಕಾಟ ನಡೆದೇ ಇದೆ. ಆದರೆ ಶಾಂತಿ ಸಿಗುವ ನಿಶ್ಚಿತ ಸ್ಥಳವಾದರೂ ಯಾವುದು? ದಟ್ಟ ಅರಣ್ಯವೋ, ಗುಂಡಾರವೋ. ಅಥ–ವಾ ಯೋಗ, ಧ್ಯಾನ, ಸಮಾಧಾನ ಕೊಡಬಹುದೇ? ಇಲ್ಲವೆ ಮಹಾತ್ಮರ ವಿಚಾರಧಾರೆಗಳನ್ನು ಕೇಳುವುದು, ಒಳ್ಳೆಯ ಓದು ಇವೆಲ್ಲವೂ ಶಾಂತಿಗೆ ಮೂಲಗಳು ನಿಜ ಹೌದು!

ಇಂದಿನ ದಾವಂತದ ಬದುಕಿನಲ್ಲಿ ನಿಮಿಷ ನಿಮಿಷಕ್ಕು ಗೊಂದಲ, ಗಡಿಬಿಡಿ,ಪರದಾಟ ಇಂತಹ ಸ್ಥಿತಿಯಲ್ಲಿ ನಮ್ಮ ಮನಸ್ಸಿನ ಹೊರತು ಇವೆಲ್ಲವೂ ಶಾಶ್ವತ ಪರಿಹಾರ ಅಲ್ಲ ಎಂದೆನಿಸದೆ ಇರದು. ಏಕೆಂದರೆ ಮನಸ್ಸಿನ ಅಸ್ಥಿರತೆಯಲ್ಲಿ ಹೇಳಿದ್ದು ಕೇಳಿದ್ದು ಓದಿದ್ದು ಎಷ್ಟು ಹೊತ್ತು ಅಳವಡಿಸಿಕೊಂಡು ಅದರಂತೆ ಜೀವಿಸಲಿಕ್ಕೆ ಸಾಧ್ಯ,ಆಗುತ್ತಾ?... ಆಗುವುದಿಲ್ಲ,

ಹೇಳುವುದು ಒಂದು ರೀತಿ ಜೀವಿಸುವುದು ಒಂದು ರೀತಿ ಹೀಗಾಗ ಬಾರದು, ತೀರದಾಸೆಯ ಬೆನ್ನೇರಿ ಆಯಾಸ ಪಡವುದು ಬೇಕೆ? ಸುಖ ದುಃಖಕೆ ಎಣೆ ಇಲ್ಲ, ಸುಖ ಶಾಂತಿ ಹೊರಗಿಲ್ಲ ತನ್ನಲ್ಲೆ ಅರಿವು ಆನಂದವೆಲ್ಲ ಅಲ್ಲವೇ?.

ನಮ್ಮ ಮನಸಿಗೆ ಯಾವುದು ಸಮಾಧಾನ ಕೊಡುವುದೋ, ನಮಗೆ ಯಾವುದು ಮಾಡಲು ಸಾಧ್ಯವೋ ಆ ಕೆಲಸವನ್ನು ಮಾಡುವುದರಿಂದ ಮನಸಿಗೆ ಸಮಾಧಾನ ಸಿಗುವುದು ಖಂಡಿತ. ಬಸವಾದಿ ಶರಣರ ಕಾಲದಲ್ಲಿ ತಮ್ಮ ತಮ್ಮ ಕಾಯಕದಲ್ಲಿ ಶಾಂತಿ ನೆಮ್ಮದಿಯನ್ನು ಕಂಡು ಆ ಮೂಲಕ ಸಾಕ್ಷಾತ್ಕಾರ ಕಂಡುಕೊಂಡವರು ನಮ್ಮ ಶರಣರು. ಅವರವರ ಕಾಯಕ ಯಾವುದಾದರೇನು, ಕೀಳೆನ್ನದೆ, ಮೇಲೆನ್ನದೆ ಬದುಕಿದ ಉದಾಹರಣೆ ಸಾಕಷ್ಟಿದೆ. ಕಾಯಕಕ್ಕೆ ಕೀಳು ಮೇಲುಗಳಿಲ್ಲ ಅವರವರ ಕಾಯಕ ಅವರಿಗೆ ಮೇಲು..

**ಗೃಹಿಣಿ ಗೃಹವನ್ನು ಅಚ್ಚುಕಟ್ಟಾಗಿ**

ಇಡುವುದರ ಮೂಲಕ, ಗುರು ತನ್ನ ಶಿಷ್ಯರಲ್ಲಿ ಶೈಕ್ಷಣಿಕ ಏಳ್ಗೆ ಕಾಣುವುದರಲ್ಲಿ, ಸಮಾಜ ಸುಧಾರಕರು ಸೇವಕರಾಗಿ, ಸಮಾಜ ನನ್ನ ಮನೆ ಎನ್ನುವಷ್ಟು ಸಕ್ರೀಯವಾಗಿ ಸೇವೆ ಮಾಡುವುದರ ಮೂಲಕ, ಸಾಹಿತಿಯಾಗಿ ಸಾಹಿತ್ಯವನ್ನು ಪೂಜ್ಯ ಭಾವದೊಂದಿಗೆ ಶ್ರದ್ಧೆಯಿಂದ ತಾಳ್ಮೆಯಿಂದ ಬರವಣಿಗೆಯಲ್ಲಿ ತೊಡಗುವುದರ ಮೂಲಕ, ಯಾವುದೇ ಕೆಲಸ ಮಾಡಿದರೂ, ನಿಷ್ಕಾಮ ಪ್ರೀಯರಾಗಿದ್ದಾಗ ಆಯಾ ಕ್ಷೇತ್ರದಲ್ಲಿನ ವೃತ್ತಿಗೌರವ ವೃದ್ಧಿಯಾಗಿ ತನ್ಮೂಲಕ ಶಾಂತಿ ನೆಮ್ಮದಿಯನ್ನು ಪಡೆಯಲು ಸಾಧ್ಯ.

ಶಾಂತಿಗಾಗಿ ಈ ಜಗದಲ್ಲಿ ಬಹಳ ತೆಲೆಕೆಡಿಸಿಕೊಂಡು ತಿರುಗಿದವರಿದ್ದಾರೆ, ಮನಶಾಂತಿಗಾಗಿ ಪೂಜೆ ಪುನಸ್ಕಾರ ಹೋಮ ಹವನಾದಿಗಳನ್ನು ಇನ್ನೂ ಏನೇಲ್ಲ ಮಾಡಿ ಆ ಭ್ರಮೆಯಲ್ಲಿಯೆ ಭ್ರಮಿತರಾದವರೂ ಇದ್ದಾರೆ, ಶಾಂತಿ, ನೆಮ್ಮದಿ ಸಮಾಧಾನಕ್ಕೆಂದು ಹುಡುಕುತ್ತಾ ಹೋಗಿ ಮರಳಿ ಮನಗೆ ಬಾರದವರೂ ಇದ್ದಾರೆ.

ಮನೆ ಮಠ ಬಿಟ್ಟು ಜವಾಬ್ದಾರಿ ನಿಭಾಯಿಸದೆ ಹೋದರೆ, ಜನ ಆಡಿ ಕೊಳ್ಳುವುದನ್ನು ಕೇಳಿ ಇನ್ನಷ್ಟು ನಮ್ಮ ಮನ ಶಾಂತಿ ಕೆಡುತ್ತದೆ, ನಮ್ಮ ಮನಸ್ಸನ್ನು ಶಾಂತಿ ಗೊಳಿಸುವ ಕೆಲಸ ಯಾವುದು ಎಂದು ಅದನ್ನು ನಾವು ನಮ್ಮಲ್ಲಿಯೇ ನಾವೇ ಹುಡುಕಬೇಕು, ಸಣ್ಣ ಸಣ್ಣ ವಿಷಯಕ್ಕೆ ಮನಸ್ಸು ಗಲಿಬಿಲಿ ಮಾಡಿಕೊಳ್ಳವುದು ಬಿಡಬೇಕು, ಒಂದೇ ತೆರನಾಗಿ ಮನಸ್ಸನ್ನು ತರಬೇತಿ ಗೊಳಿಸಬೇಕು. ನಮ್ಮೊಳಗೆ ನಿರಾಳತೆ ಅಳವಡಿಸಿಕೊಳ್ಳಬೇಕು, ಆಗ ನಾವು ಎಲ್ಲಿಯೇ ಇರಲಿ ಎಂತಹ ಸಂದರ್ಭದಲ್ಲೂ ಕೂಡ ಶಾಂತಿಯಿಂದ ಇರಬಹುದೆನ್ನುವುದು ನನ್ನ ಅನಿಸಿಕೆ. ಮೊದಲು ನಮ್ಮ ಮನಸ್ಸು ಶಾಂತವಾಗಿದ್ದರೆ ಶಾಂತಿಯನ್ನು ಎಲ್ಲಿಯೂ ಹುಡುಕಿಕೊಂಡು ಹೋಗುವ ಅವಶ್ಯಕತೆ ಇಲ್ಲ, ಹೊರಗಿನ ಪ್ರಶಾಂತತೆ ಎಷ್ಟೇ ಇದ್ದರೂ ಅಂತರಂಗದ ಶಾಂತತೆಯೇ ಬಹಳ ಮುಖ್ಯ ಅಲ್ಲವೇ?



ಕಸ್ತೂರಿ. ಡಿ. ಪತ್ತಾರ.
ಬೆಂಗಳೂರು

# ಸಿ.ಟಿ. ರವಿ ವಿರುದ್ಧ ಶೋಭಾ ಪರೋಕ್ಷ ವಾಗ್ದಾಳಿ




ವಿಜಯಪುರ: ಉಡುಪಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಟಿಕೆಟ್ ಗೊಂದಲ ಇರುವುದು ನಿಜ. ಮಾಜಿ ಸಚಿವ ಸಿ.ಟಿ. ರವಿ ಟಿಕೆಟ್ ಕೇಳಿದ್ದಾರೆ. ಅವರು ಅಪೇಕ್ಷೆ ಪಡುವುದು ತಪ್ಪಲ್ಲ. ನನ್ನ ಮೇಲೆ ಒಂದು ಗುಂಪು ಮಾತ್ರ ವಿರೋಧ ಮಾಡುತ್ತಿದೆ. ಆದರೆ, ತಮ್ಮ ಸೋಲನ್ನು ಇನ್ನೊಬ್ಬರ ಮೇಲೆ ಹೊರಿಸಬಾರದು. ಅದು ತಾಯಿಗೆ ಮಾಡಿದ ದ್ರೋಹ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅಸಮಾಧಾನವನ್ನು ಹೊರಹಾಕಿದರು. ಈ ಮೂಲಕ ಸಿ.ಟಿ. ರವಿ ವಿರುದ್ಧ ಮೊದಲ ಬಾರಿಗೆ ಪರೋಕ್ಷ ವಾಗ್ದಾಳಿ ನಡೆಸಿದ್ದಾರೆ.

ವಿಜಯಪುರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ನಮ್ಮದು ಸಂಘ ಪರಿವಾರ ಗಟ್ಟಿ ಇರುವ ಜಿಲ್ಲೆ. ಉಡುಪಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ಕೊಟ್ಟರೂ ಗೆಲ್ಲಬಹುದು. ಹೀಗಾಗಿ ಬೇರೆಯವರು ಟಿಕೆಟ್ ಕೇಳುತ್ತಿದ್ದಾರೆ. ನನಗೆ ಎರಡು ಬಾರಿ ಟಿಕೆಟ್ ಕೊಟ್ಟಿದ್ದಾರೆ. ಈಗ ನನ್ನ ಮೇಲೆ ಕೆಲವರು ವಿರೋಧ ಮಾಡುತ್ತಿದ್ದಾರೆ. ಇನ್ನೊಬ್ಬರಿಗೆ ಅವಮಾನ ಮಾಡಿ ಟಿಕೆಟ್ ಕೇಳಬಾರದು. ಅದು ನನ್ನ ಕ್ಷೇತ್ರದಲ್ಲಿ ನಡೆಯುತ್ತಿದೆ. ಇದು ಬೇಸರದ ಸಂಗತಿಯಾಗಿದೆ ಎಂದು ಹೇಳಿದರು.

ನನ್ನ ವಿರುದ್ಧ ವ್ಯವಸ್ಥಿತ ಗುಂಪಿನಿಂದ ಷಡ್ಯಂತ್ರ: ಟಿಕೆಟ್ ಪಡೆಯಲು ನನ್ನ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ. ವ್ಯವಸ್ಥಿತವಾಗಿ ಒಂದು ಗುಂಪು ವಿರೋಧ ಮಾಡುತ್ತಿದೆ. ಇದರಿಂದ ನಾನು ವಿಚಲಿತಳಾಗಿಲ್ಲ. ಮಾಜಿ ಸಚಿವ ಸಿ.ಟಿ. ರವಿ ಟಿಕೆಟ್ ಕೇಳಿರುವುದು ನಿಜ. ಅವರು ಟಿಕೆಟ್‌ಗೆ ಅಪೇಕ್ಷೆಪಟ್ಟರೆ ತಪ್ಪಲ್ಲ. ಕಾರ್ಯಕರ್ತರು ನನ್ನನ್ನು ವಿರೋಧ ಮಾಡುತ್ತಿಲ್ಲ. ಒಂದು ಗುಂಪು ವಿರೋಧ ಮಾಡುತ್ತಿದೆ. ನಾನು ಹೆತ್ತ ತಾಯಿಗೆ ದ್ರೋಹ ಮಾಡಲ್ಲ, ನಾನು ಈ ಹಿಂದೆ ಸಹ ಯಾ–ರಿಗೂ ವಿರೋಧ ಮಾಡಿಲ್ಲ. ಯಾರೇ ಆಗಲಿ ತಮ್ಮ ಸೋಲನ್ನು ಇನ್ನೊಬ್ಬರ ಮೇಲೆ ಹೊರಿಸಬಾರದು. ಅದು ತಾಯಿಗೆ ಮಾಡಿದ ದ್ರೋಹ ಎಂದು ಶೋಭಾ ಕರಂದ್ಲಾಜೆ ಹೇಳಿದರು.

# ದೇವಿ ಸಿನಿಮಾದ ಶಾಕಿಂಗ್ ವಿಚಾರ ಹೇಳಿದ ನಟಿ ಪ್ರೇಮಾ




ಬೆಂಗಳೂರು: ಕನ್ನಡತಿ ನಟಿ ಪ್ರೇಮಾ ಅವರು ಒಂದು ಕಾಲದಲ್ಲಿ ತೆಲುಗು, ಮಲಯಾಳಂ, ಕನ್ನಡ ಸಿನಿಮಾದಲ್ಲಿ ಬಹುಬೇಡಿಕೆಯ ನಟಿ. 90ರ ದಶಕದಲ್ಲಿ ಪ್ರೇಮಾ ಅನೇಕ ಹಿಟ್ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದರು. ಇದೀಗ ಪ್ರೇಮಾ ಅವರು ಸಿನಿಮಾ ಚಿತ್ರೀಕರಣದ ವೇಳೆ ನಡೆದಿರುವ ಒಂದು ಘಟನೆಯಿಂದ ವ್ಯಕ್ತಿಯೊಬ್ಬ ಪ್ರಾಣ ಕಳೆದುಕೊಂಡಿರುವ ಘಟನೆಯ ಕುರಿತಾಗಿ ಹೇಳಿದ್ದಾರೆ.

ಕೋಡಿ ರಾಮಕೃಷ್ಣ ಟಾಲಿವುಡ್‌ನ ಖ್ಯಾತ ನಿರ್ದೇಶಕರಲ್ಲಿ ಒಬ್ಬರು. ಇವರು ಇದೀಗ ನಮ್ಮೊಂದಿಗೆ ಇಲ್ಲ. ಆದರೆ ಇವರ ನಿರ್ದೇಶನದಲ್ಲಿ ಮೂಡಿ ಬಂದಿರುವ ಅನೇಕ ಸಿನಿಮಾಗಳು ಈಗಲೂ ನಮ್ಮನ್ನು ರಂಜಿಸುತ್ತಿರುತ್ತದೆ. ಕೋಡಿ ರಾಮಕೃಷ್ಣ ನಿರ್ದೇಶನದ ಸೂಪರ್ ಹಿಟ್ ಚಿತ್ರಗಳಲ್ಲಿ ದೇವಿ ಸಿನಿಮಾವೂ ಒಂದು. ಈ ಸಿನಿಮಾ ಬಿಡುಗಡೆಯಾಗಿ ಇದೀಗ 25 ವರ್ಷಗಳಾಗಿವೆ. ನಟಿ ಪ್ರೇಮಾ ಅವರು ಈ ಸಿನಿಮಾ ಕುರಿತಾಗಿ ಮಾತನಾಡಿದ್ದು ಈಗ ವೈರಲ್ ಆಗಿದೆ.

# ಕನ್ನಡಿಗರಾದ ನಾವೆಲ್ಲ ತಾಯಿ, ಗುರು, ಮಣ್ಣಿನ ಋಣ ತೀರಿಸಲೇಬೇಕು: ಸಮ್ಮೇಳನಾಧ್ಯಕ್ಷ ಡಾ. ಚೌಡಯ್ಯ

## 12ನೇ ತಾಲೂಕು ಸಾಹಿತ್ಯ ಸಮ್ಮೇಳನ; ತಾಲೂಕಿನಾದ್ಯಂತ ಹೊಸ ಸಂಚಲನ: ಶಾಲಾ ಮಕ್ಕಳಿಂದ ಮೆರೆದ ಅಭಿಮಾನ; ನುಡಿ ಹಬ್ಬಕ್ಕೆ ಶಾಸಕರಿಂದ ಅಪಮಾನ

**ವಿಶೇಷ ವರದಿ: ಮಣ್ಣೆ ಮೋಹನ್**

ನೆಲಮಂಗಲ: "ಕನ್ನಡಿಗರಾದ ನಾವೆಲ್ಲ ತಾಯಿಯ ಋಣ, ಗುರುವಿನ ಋಣ, ಮಣ್ಣಿನ ಋಣ ತೀರಿಸಲೇಬೇಕು. ಮಣ್ಣು ಎಂದರೆ ಕೇವಲ ಮಣ್ಣು– ಕಲ್ಲುಗಳಲ್ಲ, ಕೋಟೆ– ಕೊತ್ತಲಗಳಲ್ಲ, ಬದಲಿಗೆ ಅಲ್ಲಿನ ಜನ ಜೀವನ, ಶೈಕ್ಷಣಿಕ ಚರಿತ್ರೆ, ಸಮುದಾಯಗಳು ಬೆಳೆದ ಸಂಗತಿ, ಭಾಷೆಯ ಉಜ್ಜೀವನ, ಆಚಾರ ವಿಚಾರಗಳು, ರಾಜ–ಕೀಯ ಏರುಪೇರುಗಳನ್ನು ಒಳಗೊಂಡಿರುತ್ತದೆ" ಎಂದು 12ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ಚೌಡಯ್ಯ ತಿಳಿಸಿದ್ದಾರೆ. ಅವರು ಪವಾಡ ಶ್ರೀ ಬಸವಣ್ಣ ದೇವರ ಮಠದ ಆವರಣದಲ್ಲಿ, ನಾಡಪ್ರಭು ಕೆಂಪೇಗೌಡ ವೇದಿಕೆಯಲ್ಲಿ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು "ಹುಟ್ಟುವಾಗ ಎಲ್ಲರೂ ಶೂದ್ರರೇ. ಅವರಿಗೊಂದು ಸಂಸ್ಕಾರ ಕೊಟ್ಟರೆ ಚಿನ್ನದಂತಹ ಹೊಳಪು ಮೂಡಿ ಅವರನ್ನು ಮಹಾಪುರುಷರನ್ನಾಗಿ ಮಾಡುತ್ತದೆ. ನರೇಂದ್ರ– ವಿವೇಕಾನಂದನಾಗಿದ್ದು, ಗಾಂಧೀಜಿ– ಮಹಾತ್ಮ ಎನಿಸಿ,ಕೊಂಡಿದ್ದು ಬುದ್ಧ– ಭಗವಾನ್ ಬುದ್ಧ ಆದದ್ದು ಅವರವರ ಆಚಾರ ವಿಚಾರ ನಡೆನುಡಿಯಿಂದ. ಅಥ–ರ್ಾತ್ ಉತ್ತಮ ಸಂಸ್ಕಾರದಿಂದ. ಇಂತಹ ಸಂಸ್ಕಾರ ಬರುವುದು ದಯೆ, ಶ್ರದ್ಧೆ, ವಿನಯ, ಶಿಸ್ತು, ನಿರಂತರ ಅಧ್ಯಯನ, ಪರಿಶ್ರಮದಿಂದ. ಜಾತಿ ಯಾವುದಾದರೇನು ನೀತಿ ಮುಖ್ಯ. ಹಣ ಕೂಡಿಸಬಹುದು, ಕಾರ್ಯಕ್ರಮ ಸಂಯೋಜನೆ ಮಾಡಬಹುದು, ಆದರೆ ಜನರನ್ನು ಸೇರಿಸುವುದು ತುಂಬಾ ಕಷ್ಟ. ಸಮಾಜ ಸುಧಾರಣೆ ಬಹಳ ಕಷ್ಟದಾಯಕ.

ಆದರೂ ಅದನ್ನು ಮಾಡಲೇಬೇಕು. ನನಗೆ ಈ ವಹಿಸಿರುವ ಈ ಜವಾಬ್ದಾರಿ ತುಂಬಾ ದೊಡ್ಡದು ಎಂದು ಭಾವಿಸುತ್ತೇನೆ. ಮಣ್ಣೆ ಮೋಹನ್ ರವರು ಹೇಳಿದಂತೆ ಇದು ನನ್ನ ಪೂರ್ವ ಜನ್ಮದ ಪುಣ್ಯ. ನಮ್ಮ ಪೂರ್ವಿಕರ ಸೇವೆಯ ಪ್ರತಿಫಲ. ನನಗಿಂತ ಹೆಚ್ಚಿನ ಸಾಧನೆ ಮಾಡಿರುವವರು ನೆಲಮಂಗಲದಲ್ಲಿ ಇದ್ದಾರೆ, ನೆಲಮಂಗಲದವರು ಹೊರಗಡೆಯೂ ಇದ್ದಾರೆ.

ನಮ್ಮ ತಂದೆ ಹೆಬ್ಬೆಟ್ಟು. ನನ್ನ ತಾಯಿ ಹೆಬ್ಬೆಟ್ಟು ಅವರು ಕಲ್ಲು ಚಚ್ಚಿಕೊಂಡು ಜೀವನ ಮಾಡುವ ಒಂದು ವರ್ಗದವರು.

ಅವರ ಮಗ ಅಕ್ಷರ ಜ್ಞಾನವನ್ನು ತಿಳಿದುಕೊಂಡು ಸಾಹಿತ್ಯ ಕೃಷಿ ಮಾಡಿರುವುದೇ ದೊಡ್ಡ ಸಾಧನೆಯೇ ಸರಿ. ಅದನ್ನು ನೀವು ಗುರುತಿಸಿರುವುದು ಅದೊಂದು ಮಹತ್ ಸಾಧನೆಯ ಸರಿ.ಇದು ಮಣ್ಣೆ ಮೋಹನ್ ರವರು ಹೇಳಿರುವಂತೆ ಅವರ ಮಾತಿಗೆ ಪೂರಕವಾಗಿ ಒತ್ತು ಕೊಟ್ಟಿರುವಂಥದ್ದು.ಈ ಗೌರವವನ್ನು ನಾನು ನನ್ನ ಕುಟುಂಬ ಅತ್ಯಂತ ಗೌರವಯುತವಾಗಿ ಕಾಣುತ್ತೇವೆ" ಎಂದು ನುಡಿದರು.

**ಸಮ್ಮೇಳನಾಧ್ಯಕ್ಷರ ಭಾಷಣದ ಮುಖ್ಯಾಂಶಗಳು**

ನೆಲಮಂಗಲ ತಾಲೂಕು ಸಾಂಸ್ಕೃತಿಕ ಕ್ಷೇತ್ರದಲ್ಲಿ ರಾಜ್ಯಮಟ್ಟದಲ್ಲಿ ಹೆಸರು ಮಾಡಿದ ದಿಗ್ಗಜರ ಕರ್ಮಭೂಮಿಯಾಗಿದೆ. ಕ್ರಿ.ಶ 768ರಲ್ಲಿ ಮಣ್ಣೆ ಗ್ರಾಮವನ್ನು ಆಳಿದ ಅಂದಿನ ಮಾನ್ಯಪುರ ಗಂಗರ ಅರಸ ಶ್ರೀ ಪುರುಷ ಸ್ವತಃ ವಿದ್ವಾಂಸ ಹಾಗೂ ಕನ್ನಡ ಲೇಖಕನಾಗಿದ್ದ. ಅವನು ರಚಿಸಿದ "ಗಜಶಾಸ್ತ್ರ" ಕಾವ್ಯ ಇತಿಹಾಸದಲ್ಲಿ ಕನ್ನಡ ಲೋಕಕ್ಕೆ ಕೊಡುಗೆಯಾಗಿದೆ. ಈ ತಾಲೂಕಿಗೆ ಅನೇಕ ಮಠ–ಮಾನ್ಯಗಳ ಮತ್ತು ಮಠಾಧೀಶರ ಕೊಡುಗೆ ಅಪಾರವಾದದ್ದು. ಶ್ರೀ ಸಿದ್ಧಗಂಗಾ ಮಠದ ಉದ್ದಾನ ಶಿವಯೋಗಿಗಳು ಲಕ್ಕೂರು ಗ್ರಾಮದವರು. ಹಾಗೆಯೇ ಚೌಡಸಂದ್ರ ಗ್ರಾಮದ ಹೊನ್ನಪ್ಪ ಭಾಗವತರು ಈ ತಾಲೂಕಿನ ಹೆಗ್ಗಳಿಕೆಯಾಗಿದ್ದಾರೆ. ನಾಟಕ ರತ್ನ ಗುಬ್ಬಿ ವೀರಣ್ಣನವರು ಭಾರತಿಪುರದ ಶ್ರೀಮತಿ ರುದ್ರಮ್ಮನವರೊಂದಿಗೆ ವಿವಾಹವಾಗಿದ್ದರು.

ಶ್ರೀ ಮಹಾತ್ಮ ಗಾಂಧಿಯವರು ಡಾಬಸ್ಪೇಟೆಯಲ್ಲಿ ಹರಿಜನ ಉದ್ಧಾರಕ್ಕಾಗಿ ಹಾಗೂ ಅಸ್ಪೃಶ್ಯತೆ ಹೋಗಲಾಡಿಸಲು ಜಾಗೃತಿ ಜಾಥಾದ ಅಂಗವಾಗಿ ದೇಣಿಗೆ ಸಂಗ್ರಹಿಸಲು ಪ್ರವಾಸ ಮಾಡಿದ ಸಂದರ್ಭದಲ್ಲಿ ತ್ಯಾಮಗೊಂಡ್ಲು, ಡಾಬಸ್ ಪೇಟೆ ಹಾಗೂ ನೆಲಮಂಗಕ್ಕೆ ಭೇಟಿ ನೀಡಿದ್ದರು.

ನಿಡವಂದ ಸೀಮೆಯ ಹಲಸು, ಹೊಸಕೋಟೆ ಪ್ರದೇಶದ ಮಾವು, ದೇವನಹಳ್ಳಿ ಪರಿಸರದ ಚಕೋತ, ಚನ್ನಪಟ್ಟಣ ಸುತ್ತಲಿನ ರಸಬಾಳೆ ನಮ್ಮ ಜಿಲ್ಲೆಯ ಹೆಮ್ಮೆಗಳಾಗಿದ್ದವು. ಆದರೆ ಇಂದು ಕೃಷಿಭೂಮಿ ಮಾಯವಾಗಿ, ಕೈಗಾರಿಕಾ ಭೂಮಿ ವಿಸ್ತರಿಸುತ್ತಿದೆ. ನೆಲಮಂಗಲ ಕೈಗಾರಿಕಾ ಕ್ಷೇತ್ರದಲ್ಲಿ ಬಹುದೊಡ್ಡ ಕೈಗಾರಿಕಾ ಕೇಂದ್ರವಾಗಿ ವಿಶ್ವದ ಗಮನ ಸೆಳೆದಿದೆ. 4,530.03 ಎಕರೆ ಪ್ರದೇಶದಲ್ಲಿ 1428 ಕೈಗಾರಿಕೆಗಳು ಇಲ್ಲಿ ನೆಲೆ ನಿಂತಿವೆ. 2800 ಕೋಟಿಗಳಷ್ಟು ಬಂಡವಾಳ ಹೂಡಿಕೆ ಮಾಡಲಾಗಿದೆ. ಸುಮಾರು 35,700 ಮಂದಿಗೆ ಉದ್ಯೋಗ ನೀಡಲಾಗಿದೆ. ಕೆರೆಗಳು ಒಂದೊಂದಾಗಿ ಕಾಣೆಯಾಗುತ್ತಿವೆ. ಸೋಂಪುರ ಮತ್ತು ತ್ಯಾಮಗೊಂಡ್ಲು ಹೋಬಳಿಯ ಎಲ್ಲಾ ಕೆರೆಗಳು ಮುಂದಿನ ದಿನಗಳಲ್ಲಿ ಕೈಗಾರಿಕೆಗಳಿಂದ ಕಲುಷಿತಗೊಳ್ಳುತ್ತವೆ. ಇದನ್ನು ತಡೆಯಬೇಕಿದೆ. ಸುಸಜ್ಜಿತವಾದ ಸಂಪರ್ಕ ವ್ಯವಸ್ಥೆ, ಆರೋಗ್ಯ ವ್ಯವಸ್ಥೆ ಮುಂತಾದವು ರೂಪುಗೊಳ್ಳಬೇಕಿದೆ.

**ಸಮ್ಮೇಳನದ ನಿರ್ಣಯಗಳು**

ತಾಲೂಕಿನಲ್ಲಿ ಸಾಹಿತಿಗಳು ಒಂದೆಡೆ ಕುಳಿತು ಚರ್ಚಿಸಲು ಒಂದೇ ಒಂದು ಕಚೇರಿ ಇಲ್ಲ. ನಗರದ ಹೊರಗಡೆಯಾದರೂ ಪರವಾಗಿಲ್ಲ, ವಿಶಾಲವಾದ ಸ್ಥಳವನ್ನು ಪಡೆದು ಕಸಾಪ ಕಚೇರಿ ಆರಂಭಿಸಲಿ. 500 ಜನರು ಕುಳಿತು ಒಂದು ನಾಟಕವಾಡಲು, ಮಕ್ಕಳ ಕಾರ್ಯಕ್ರಮ ನಡೆಸಲು, ಇತರೆ ಸಾಂಸ್ಕೃತಿಕ ಚಟುವಟಿಕೆ ನಡೆಸಲು ಒಂದು ರಂಗಮಂದಿರ ಇಲ್ಲ. ಇಲ್ಲಿ ರಂಗಮಂದಿರ ತಲೆ ಎತ್ತಲಿ. ಇಲ್ಲಿನ ಕೈಗಾ–ರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ದೊರಕಲಿ. ತಾಲೂಕು ಸಾಹಿತ್ಯ ಸಮ್ಮೇಳನಕ್ಕೆ 1 ಲಕ್ಷ ರೂ. ಅನುದಾನ ದೊರಕಲಿ.

**ಸ್ವಾಮೀಜಿಗಳ ಆಶೀರ್ವಚನ**

"12ನೇ ಶತಮಾನದ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಕರ್ನಾಟಕ ಸರ್ಕಾರ ಘೋಷಿಸಿರುವ ಸಂದರ್ಭದಲ್ಲಿ, ತಾಲೂಕಿನಲ್ಲಿ 12ನೇ ಸಾಹಿತ್ಯ ಸಮ್ಮೇಳನ



ನಡೆಯುತ್ತಿರುವುದು ವಿಶೇಷವಾಗಿದೆ. 12ನೇ ಶತಮಾನದ ವಚನ ಸಾಹಿತ್ಯ ಜನಸಾಮಾನ್ಯರ ಸಾಹಿತ್ಯವಾಗಿತ್ತು. ಹಾಗೆಯೇ ಜನಸಾಮಾನ್ಯರೇ ಒಟ್ಟಾಗಿ ಸೇರಿ ನಡೆಸುತ್ತಿರುವ ಈ ಸಾಹಿತ್ಯ ಸಮ್ಮೇಳನಕ್ಕೆ ಶುಭವಾಗಲಿ" ಎಂದು ಪವಾಡ ಶ್ರೀ ಬಸವಣ್ಣ ದೇವರ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ತಿಳಿಸಿದರು.

"ದೇವರೇ ಕೊಟ್ಟ ತೆಂಗಿನಕಾಯಿ, ಹೂವು–ಹಣ್ಣುಗಳನ್ನು ಅವನಿಗೆ ಅರ್ಪಿಸಿ ಅವನಲ್ಲಿ ವರ ಕೇಳುವ ಬದಲು ದೀನದಲಿತರ, ಅಸಹಾಯಕರ ಸೇವೆ ಮಾಡುವುದರ ಮೂಲಕ ಅತ್ಯಂತ ಬುದ್ಧಿವಂತವಾದ ಮಾನವ ಜನ್ಮವನ್ನು ಸದುಪಯೋಗಪಡಿಸಿಕೊಳ್ಳಿ. ಅಂತಹ ಜ್ಞಾನವನ್ನು ಪ್ರಚುರಪಡಿಸಲು ಸಾಹಿತ್ಯ ಒಂದು ಮಾರ್ಗ. ಅಂತಹ ಸಾಹಿತ್ಯ ನೆಲಮಂಗಲ ತಾಲೂಕಿನಲ್ಲಿ ಇನ್ನಷ್ಟು ವಿಜೃಂಭಿಸಲಿ ಎಂದು ಶಿವಾನಂದ ಆಶ್ರಮದ ಶ್ರೀ ರಮಣಾನಂದ ಮಹಾಸ್ವಾಮಿಗಳು ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಿ ಎನ್ ಕೃಷ್ಣಪ್ಪನವರು ಮಾತನಾಡಿ ಕನ್ನಡ ನಾಡಿನ ಹಿರಿಮೆ ಗರಿಮೆ, ಕನ್ನಡ ಭಾಷೆಯ ಅಸ್ಮಿತೆ, ಕನ್ನಡ ರಾಜವಂಶಸ್ಥರ ಸಾಧನೆಗಳು, ಎರಡೂವರೆ ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡದ ಪ್ರಾಚೀನತೆ, ಕನ್ನಡ ಕವಿಪುಂಗವರ ಕೊಡುಗೆ, ಕನ್ನಡ ನಾಡಿನ ಸಾಂಸ್ಕೃತಿ–ಕ ಶ್ರೀಮಂತಿಕೆ, ಭೌಗೋಳಿಕ ವಿಶೇಷತೆಗಳು, ಜನ ಜೀವನದ ವಿಭಿನ್ನ ಸಂಸ್ಕೃತಿ, ಆಚ–ಾರ –ವಿಚಾರಗಳು, ಇಲ್ಲಿನ ವಿಶಿಷ್ಟ ಸೊಗಡು–ಇವುಗಳೆಲ್ಲವನ್ನು ಸವಿಸ್ತಾರವಾಗಿ ವಿವರಿಸಿದರು.

"ಕನ್ನಡ ನೆಲದಿಂದ ಮೊದಲ್ಗೊಂಡು ನೇಪಾಳದವರೆಗೆ ಕನ್ನಡ ಸಾಮ್ರಾಜ್ಯ ವಿಸ್ತರಿಸಿತ್ತು. ನೇಪಾಳದ ಪಶುಪತಿನಾಥ ದೇವಾಲಯದಲ್ಲಿ 800 ವರ್ಷಗಳಿಂದ ಕನ್ನಡದ ಅರ್ಚಕರು ಪೂಜೆ ಸಲ್ಲಿಸುತ್ತಿದ್ದಾರೆ.

ಇದು ಕನ್ನಡಿಗರೆಲ್ಲರೂ ಅಭಿಮಾನ ಪಡುವ ಸಂಗತಿಯಾಗಿದೆ. ಆ ಪರಂಪರೆಯನ್ನು ಇಂದಿನ ನಾವುಗಳು ಮುಂದುವರಿಸಬೇಕಾಗಿದೆ. ಆ ಹಿನ್ನೆಲೆಯಲ್ಲಿ ನಾವು ನೇಪಾಳದಲ್ಲಿ ಪುಸ್ತಕ ಬಿಡುಗಡೆ ಮಾಡಿದ್ದೇವೆ. ಅತ್ಯಂತ ತಳ ಸಮುದಾಯದ ವ್ಯಕ್ತಿಯೊಬ್ಬರು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವುದು ಹೆಮ್ಮೆಯ ಸಂಗತಿಯಾಗಿದೆ.

ಅವರ ಸಾಹಿತ್ಯ ಅವರನ್ನು ಈ ಉನ್ನತ ಸ್ಥಾನಕ್ಕೆ ಏರಿಸಿದೆ. ಪತ್ರಿಯೊಬ್ಬರೂ ಸಾಹಿತ್ಯಾಸಕ್ತಿ ಮೈಗೂಡಿಸಿಕೊಳ್ಳಬೇಕಿದೆ. ನಾಡಿನ ಸಂಸ್ಕೃತಿ, ಆಚಾರ, ವಿಚಾರ, ಸಾಹಿತ್ಯ, ನೆಲ, ಜಲ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ" ಎಂದು ಚಿಂತಕ ಅಂಕಣಕಾರ ಮಣ್ಣೆ ಮೋಹನ್ ತಮ್ಮ ಪ್ರಾಥಮಿಕ ನುಡಿಯಲ್ಲಿ ಹೇಳಿದರು.

"ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿಯೇ, ನಾಲ್ವಡಿ ಕೃಷ್ಣರಾಜ ಒಡೆಯರಿಂದ 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ರಚನೆಗೊಂಡು ಕರ್ನಾಟಕ ಏಕೀಕರಣ ಮತ್ತು ಕನ್ನಡ ಸಾಹಿತ್ಯ ಬೆಳವಣಿಗೆಗೆ ಕಾರಣವಾಗಿದೆ. ನೆಲಮಂಗಲದಲ್ಲಿಯೂ ಸಹ ಕನ್ನಡ ಸಾಹಿತ್ಯ ಪರಿಷತ್ತು ತನ್ನದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದೆ. ಹಳ್ಳಿಯಿಂದ ಹಳ್ಳಿಗೆ ಸಾಹಿತ್ಯ ಸಂಚಾರ ಮತ್ತು ಶಾಲೆಯಿಂದ ಶಾಲೆಗೆ ಕನ್ನಡ ಸಂಭ್ರಮ ಎಂಬ ಕಾರ್ಯಕ್ರಮಗಳ ಮೂಲಕ ತಾಲೂಕು ಕಸಾಪ, ತಾಲೂಕಿನ ಎಲ್ಲಾ ಜನತೆಯನ್ನು ತಲುಪುವ ಕೆಲಸ ಮಾಡುತ್ತಿದೆ" ಎಂದು ತಾಲೂಕು ಕಸಾಪ ಅಧ್ಯಕ್ಷರಾದ ಪ್ರದೀಪ್ ಕುಮಾರ್ ತಿಳಿಸಿದರು.

"ಇಂಗ್ಲೀಷ್ ವ್ಯಾಮೋಹದಲ್ಲಿ ಹೊಸ ತಲೆಮಾರು ನಶಿಸಿಹೋಗುತ್ತಿದೆ. ಹಾಗಾಗಿ ಸಾಹಿತ್ಯ ಪರಿಷತ್ತಿನ ವತಿಯಿಂದ ಎಲ್ಲಾ ಶಾಲೆಗಳಿಗೆ ಭೇಟಿ ನೀಡಿ ಕನ್ನಡ ಸಾಹಿತ್ಯದ ಬಗ್ಗೆ,ಕವಿಗಳ ಬಗ್ಗೆ ಯುವಕರಲ್ಲಿ ಅರಿವು ಮೂಡಿಸುವ ಕೆಲಸ ಆಗಬೇಕಿದೆ" ಎಂದು ಕೆಪಿಸಿಸಿ ಪದವೀಧರ ವಿಭಾಗದ ಅಧ್ಯಕ್ಷ ರಾಮೋಜಿ ಗೌಡ ತಿಳಿಸಿದರು.

**ಧ್ವಜರೋಹಣ ಹಾಗೂ ಮೆರವಣಿಗೆ**

ನಗರದ ಪವಾಡ ಶ್ರೀ ಬಸವಣ್ಣ ದೇವರ ಮಠದ ಆವರಣದಲ್ಲಿ ರಾಷ್ಟ್ರ ಧ್ವಜಾರೋಣವನ್ನು ತಹಸೀಲ್ದಾರ್ ಅಮೃತ್ ಆತ್ಲೀಶ್ ನೆರವೇ–ರಿಸಿದರು. ನಾಡಧ್ವಜವನ್ನು ತಾ.ಪಂ ಇಒ ಎಲ್. ಮಧು, ಪರಿಷತ್ ಧ್ವಜವನ್ನು ಕಸಾಪ ಅಧ್ಯಕ್ಷ ಬಿ.ಆರ್.ಪ್ರದೀಪ್ ಕುಮಾರ್ ನೆರವೇರಿಸಿದರು.

ಬಳಿಕ ನಗರದ ಅಡೇಪೇಟೆಯ ಭುವನೇಶ್ವರಿ ದೇವಾಲಯದಿಂದ ಸಮ್ಮೇಳನಾಧ್ಯಕ್ಷ ಡಾ.ಚೌಡಯ್ಯ ಅವರನ್ನು ಬೆಳ್ಳಿ ರಥದಲ್ಲಿ ವಿವಿಧ ಜಾನಪದ ಕಲಾ ಪ್ರಕಾರಗಳೊಂದಿಗೆ ವೇದಿಕೆಗೆ ಕರೆತರಲಾಯಿತು. ನಗರಸಭೆ ಅಧ್ಯಕ್ಷರಾದ ಲತಾ ಹೇಮಂತ್ ಕುಮಾರ್ ರವರು ಮೆರವಣಿಗೆಗೆ ಚಾಲನೆ ನೀಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಎಂ ಎಚ್ ತಿಮ್ಮಯ್ಯನವರು ಪುಸ್ತಕ ಮಳಿಗೆಯನ್ನು ಮತ್ತು ಶಿವಪ್ರಸಾದ್ ಆರಾಧ್ಯ ರಚಿಸಿದ್ದ ಚಿತ್ರಕಲೆ ಪ್ರದರ್ಶನವನ್ನು ಉದ್ಘಾಟಿಸಿದರು.

**ಪುಸ್ತಕ ಬಿಡುಗಡೆ**

ಸಾಹಿತಿ ಮುರಳೀಧರ್ ರಚಿತ 'ಅರದ ದೀಪ' ಮತ್ತು ಇತರೆ ಐದು ಕೃತಿಗಳು, ಬಿ ಪ್ರಕಾಶ್ ಮೂರ್ತಿ ಅವರ 'ನಿರಪರಾಧಿ', ನಂದಾದೀಪ ಅವರ 'ಕಾವ್ಯ ದರ್ಶಿನಿ', ಸಿರಾಜ್ ಅಹಮ್ಮದ್ ಅವರ 'ನವಿಲಿಗೆ ಸಾವಿರ ನಯನಗಳು', ಪ್ರೇಮ ಕುಮಾರ್ ಅವರ 'ಮನದ ಹನಿಗಳು' ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

**ವಿಚಾರಗೋಷ್ಠಿ ಮತ್ತು ಕವಿಗೋಷ್ಠಿ**

ಸಮ್ಮೇಳನದ ಅಂಗವಾಗಿ ಮಣ್ಣೆ ಮೋಹನ್ ಅಧ್ಯಕ್ಷತೆಯಲ್ಲಿ ವಿಚಾರಗೋಷ್ಠಿ ಏರ್ಪಡಿಸಲಾಗಿ–ತ್ತು. ಸಕಾರಾತ್ಮಕತೆ ಮತ್ತು ಮಹಿಳೆ ಎಂಬ ವಿಷಯದ ಬಗ್ಗೆ ಅಕ್ಕಮಹಾದೇವಿ ಸಿ, ಕನ್ನಡ ನಾಡು ನುಡಿ ಮತ್ತು ಈ ನೆಲ ವಿಷಯದ ಬಗ್ಗೆ ರುದ್ರಸ್ವಾಮಿ, ಆಧುನಿಕ ಕೃಷಿಯಲ್ಲಿ ಯುವಜನರ ಪಾತ್ರ ಕುರಿತು ಕಾಸರಘಟ್ಟ ಗಂಗಾಧರ್ ಹಾಗೂ ಕರುನಾಡು ಮತ್ತು ಸಾಹಿತ್ಯ ವಿಷಯದ ಬಗ್ಗೆ ಬೆಟ್ಟಸ್ವಾಮಿಗೌಡ ವಿಚಾರ ಮಂಡಿಸಿದರು.

ಲಕ್ಷ್ಮೀ ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ಏರ್ಪಡಿಸಲಾಗಿತ್ತು. ರೇಣುಕಮ್ಮ, ಪ್ರೇಮ್ ಕುಮಾರ್, ಮನುಭೈರನಹಳ್ಳಿ, ರಾಮು ಹುರುಳಿಹಳ್ಳಿ, ಚೇತನ್ ತಾವರೆಕೆರೆ, ರೇಣುಕಾ ಪ್ರಸಾದ್, ಶಿವಪ್ರಸಾದ್ ಆರಾಧ್ಯ, ಎನ್ ಆರ್ ನಾಗರಾಜ್, ಬಲವಂತ ಮರಟಗಿ, ಅಭಿಷೇಕ್, ಡಾ. ಯಶೋಧ, ಅನು ಗೋವೇನಹಳ್ಳಿ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದರು. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಸಿ.ಎಚ್.ಸಿದ್ದಯ್ಯ ತಂಡದವರು ನಾಡಗೀತೆ ಹಾಡಿದರು. ಕು. ಐಶ್ವರ್ಯ ಮತ್ತು ತಂಡದ ವತಿಯಿಂದ ಕೋಲಾಟ ಏರ್ಪಡಿಸಲಾಗಿತ್ತು. ಉಚಿತ ವೈದ್ಯಕೀಯ ಶಿಬಿರ ಜರುಗಿತು.

**ಶಾಸಕರ ಗೈರು ಹಾಜರಿ:**

ನಾಡು–ನುಡಿಗೆ ಸಂಬಂಧಿಸಿದ ನುಡಿ ಜಾತ್ರೆ ಇದಾಗಿದ್ದರಿಂದ, ತಾಲೂಕಿನ ಶಾಸಕರು ಟೊಂಕಕಟ್ಟಿ ನಿಂತು ಕಾರ್ಯಕ್ರಮವನ್ನು ನಡೆಸಿಕೊಡಬೇಕಿತ್ತು. ಆದರೆ ಕರ್ನಾಟಕದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಶಾಸಕರೊಬ್ಬರು ಕ್ಷುಲ್ಲಕ ಕಾರಣಕ್ಕೆ ಸಾಹಿತ್ಯ ಸಮ್ಮೇಳನದಿಂದ ದೂರ ಉಳಿದದ್ದು ಅವರ ಅಪ್ರಬುದ್ಧತೆಯನ್ನು ತೋರಿಸುತ್ತದೆ ಎಂಬ ಮಾತು ಕೇಳಿ ಬಂತು. ಸ್ವತಃ ಸಮ್ಮೇಳನಾಧ್ಯಕ್ಷರು, ತಾಲೂಕು ಕಸಾಪ ಅಧ್ಯಕ್ಷರು ಮತ್ತು ಎಲ್ಲಾ ಪದಾಧಿಕಾರಿಗಳು ವೈಯಕ್ತಿಕವಾಗಿ ಶಾಸಕರನ್ನು ಆಹ್ವಾನಿಸಿದ್ದರೂ ಸಹ, ಅವರು ಭಾಗವಹಿಸದೆ ಇದ್ದದ್ದು ನಾಡು ನುಡಿಗೆ ಮಾಡಿದ ಅಪಮಾನದಂತೆ ಎಂಬುದು ಅನೇಕ ಕನ್ನಡ ಮನಸ್ಸುಗಳ ಅಭಿಪ್ರಾಯವಾಗಿದೆ. ಸಮ್ಮೇಳನಾಧ್ಯಕ್ಷರೇ ಹೇಳಿದಂತೆ ಶಾಸಕರ ವರ್ತನೆ ಅವರಿಗೆ ಬಹಳ ದೊಡ್ಡ ಡ್ಯಾಮೇಜ್ ಉಂಟು ಮಾಡಿದೆ.

**ಅಚ್ಚುಕಟ್ಟಾದ ಊಟದ ವ್ಯವಸ್ಥೆ**

ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಊಟದ ಅವ್ಯವಸ್ಥೆ ಸಾಮಾನ್ಯವಾದದ್ದು. ಆದರೆ ಇಲ್ಲಿನ ಅಚ್ಚುಕಟ್ಟಾದ ಊಟದ ವ್ಯವಸ್ಥೆ ಎಲ್ಲರ ಗಮನ ಸೆಳೆಯಿತು. ಸಾಂಪ್ರದಾಯಕ ಶೈಲಿಯಲ್ಲಿ ಬಾಳೆ–ಎಲೆಯ ಊಟದ ವ್ಯವಸ್ಥೆ ಮಾಡಲಾಗಿ–ತ್ತು. ಪ್ರಾಧ್ಯಾಪಕ ಗಂಗರಾಜುರವರು ಮತ್ತು ಅವರ ಶಿಷ್ಯ ಶಿಷ್ಯ ವೃಂದ ಉಸ್ತುವಾರಿ ವಹಿಸಿದ್ದರು. ಅವರೇ ಹೇಳಿದಂತೆ ಒಟ್ಟು 1800 ಬಾಳೆ ಎಲೆಗಳು ಖಾಲಿಯಾಗವೆ. ಎಂದರೆ ಅಷ್ಟು ಜನ ಊಟ ಮಾಡಿದ್ದಾರೆ ಎಂದಥ–ರ್ಾ. ಆ ನಿಟ್ಟಿನಲ್ಲಿ ಕಾರ್ಯಕ್ರಮದ ಯಶಸ್ಸು ಅಭೂತಪೂರ್ವವಾದದ್ದು. ಸಿದ್ದಗಂಗಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಕೋಮಲ ರವರು ಸಮ್ಮೇಳನ ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಮೂರ್ತಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳ ಪರಿಚಯ ಮಾಡುತ್ತಾ ಸ್ವಾಗತ ಕೋರಿದರು. ಆನಂದ್ ವೈ ಮೌರ್ಯ ವಂದನಾರ್ಪಣೆ ಮಾಡಿದರು. ಸದಾನಂದ ಆರಾಧ್ಯ, ವಿಜಯ್ ಹೊಸಪಾಳ್ಯ, ಶಿವಲಿಂಗಯ್ಯ,ಕಂಬಾಳು ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು. ತಾಲೂಕಿನ ಎಲ್ಲಾ ಸಂಘ ಸಂಸ್ಥೆಗಳು ಸಮ್ಮೇಳನಕ್ಕೆ ಸಹಕಾರ ನೀಡಿದ್ದವು. "ತಾಲೂಕಿನ ಎಲ್ಲರೂ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಾಹಿತ್ಯ ಚಟುವಟಿಕೆಗಳನ್ನು ನಡೆಸುವಂತಾಗಲಿ. ಆ ಮೂಲಕ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳಲ್ಲಿ ಕೈಜೋಡಿಸಲಿ" ಎಂದು ಪ್ರಾಧ್ಯಾಪಕ ಗಂಗರಾಜುರವರು ತಮ್ಮ ಸಮಾರೋಪ ಭಾಷಣದಲ್ಲಿ ನುಡಿದರು.

**ಪಾಲ್ಗೊಂಡಿದ್ದ ಗಣ್ಯರು**

ಪವಾಡ ಶ್ರೀ ಬಸವಣ್ಣ ದೇವರ ಮಠದ ಶ್ರೀ ಸಿದ್ದಲಿಂಗ ಸ್ವಾಮಿಗಳು, ಶಿವಾನಂದಾಶ್ರಮದ ಶ್ರೀ ರಮಾನಂದ ಸ್ವಾಮಿಗಳು, ತಾಲೂಕು ಕಸಾಪ ಅಧ್ಯಕ್ಷ ಬಿ.ಆರ್.ಪ್ರದೀಪ್ ಕುಮಾರ್, ಲೇಖಕ ಚಿಂತಕ ಮಣ್ಣೆ ಮೋಹನ್, ತಾಲೂಕು ಕಲಾವಿದರ ಬಳಗದ ಅಧ್ಯಕ್ಷ ಜಿ ಗಂಗರಾಜು, ಕಸಾಪ ಗೌರವ ಕಾರ್ಯದರ್ಶಿ ಪ್ರಕಾಶ ಮೂರ್ತಿ, ಕಂಬಾಳು ಮಂಜುನಾಥ್, ಎಂ ನಾರಾಯಣಗೌಡ, ಬಿಜೆಪಿ ಅಧ್ಯಕ್ಷ ಜಗದೀಶ್ ಚೌದರಿ, ಜಿಲ್ಲಾ ಮಹಿಳಾ ಪ್ರತಿನಿಧಿ ಮಂಜುಳಾ ಸಿದ್ದರಾಜು, ನಿಕಟ ಪೂರ್ವ ಅಧ್ಯಕ್ಷರುಗಳಾದ ಸಿ ಕೇಶವಮೂರ್ತಿ, ಡಿ ಸಿದ್ದರಾಜು, ಸೈಯದ್ ಖಲೀಮುಲ್ಲಾ, ನಗರ ಅಧ್ಯಕ್ಷ ಮಲ್ಲೇಶ್, ಮಾರುತಿ ತೇಜಸ್ವಿ, ಚಲನಚಿತ್ರ ನಿರ್ಮಾಪಕ ಬೂದಿಹಾಲ್ ಕಿಟ್ಟಿ, ಡಾ. ಬೋಗಣ್ಣ, ವಿಜಯ್ ವಿಳೆದೆಲೆ, ಕರವೇ ನೆ ಲ ಸುರೇಶ್, ಅನ್ನಪೂರ್ಣೇಶ್ವರಿ ಬಳಗದ ರಂಗಸ್ವಾಮಿ, ದಿನೇಶ್ ಚಿಕ್ಕಮಾರನಹಳ್ಳಿ, ಜನಾರ್ಧನ್, ಆನಂದ್ ವೈ.ಮೌರ್ಯ, ಕೆ ಜಿ ಕುಮಾರ್, ಎನ್ ಆರ್ ನಾಗರಾಜ್, ಮಂಜುಳಾ ವೆಂಕಟೇಶ್, ಅಭಿಷೇಕ್, ಕಲಾವಿದರ ಸಂಘದ ಜಿಲ್ಲಾಧ್ಯಕ್ಷ ಕೆಂಪಣ್ಣ, ಬಿಎಂಟಿಸಿ ಮಾಜಿ ನಿರ್ದೇಶಕ ಮಿಲ್ಟ್ರಿ ಮೂರ್ತಿ, ಎಚ್ ಜಿ ರಾಜು ವಕೀಲ ಕನಕರಾಜು, ಜಗದೀಶ್, ಕೃಷ್ಣಯ್ಯ, ಪ್ರೇಮ್ ಕುಮಾರ್, ಭಾರತ್ ಸ್ಕೌಟ್ಸ್ ಪ್ರಕಾಶ್, ಲಯನ್ ಪ್ರಕಾಶ್, ಸಿದ್ದರಾಜಯ್ಯ, ಡಾ. ಯಶೋಧ, ರಾಮು ಹುರುಳಿಹಳ್ಳಿ, ಶಿವಪ್ರಸಾದ್ ಆರಾಧ್ಯ, ಸಿರಾಜ್ ಅಹಮದ್,ಬೈಲೇಗೌಡ, ರಂಗನಾಥ್, ಗಂಗಾಧರ್, ರವಿಕಾಂತ್, ಸಂಪತ್, ಚಾಂದ್ ಪಾಷಾ, ಬಿ ನರಸಿಂಹಯ್ಯ, ರಘು ಮತ್ತಿತರರು ಉಪಸ್ಥಿತರಿದ್ದರು.

# ಗ್ಯಾರಂಟಿ ನೀಡಿದ ಕಾಂಗ್ರೆಸ್ ಸರ್ಕಾರ ರಕ್ಷಿಸುವ ಕೆಲಸ ಮಾಡಿ: ಸತೀಶ ಜಾರಕಿಹೋಳಿ

ನಿಪ್ಪಾಣಿ: 'ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಬಡವರ ರಕ್ಷಣೆ ಮಾಡಿದೆ. ಈಗ ನೀವು ನಮ್ಮ ಸರ್ಕಾರವನ್ನು ರಕ್ಷಿಸುವ ಕೆಲಸ ಮಾಡಬೇಕಾಗಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೋಳಿ ಹೇಳಿದರು.

ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ಹಾಗೂ ನಗರಸಭೆ ವತಿಯಿಂದ ಸ್ಥಳೀಯ ಛತ್ರಪತಿ ಶಿವಾಜಿ ಮಹಾರಾಜ ಸಾಂಸ್ಕೃತಿಕ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ನಿಪ್ಪಾಣಿ ಹೋಬಳಿ ಮತ್ತು ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಿಪ್ಪಾಣಿ ತಾಲೂಕಿನಲ್ಲಿ ಇಲ್ಲಿಯವರೆಗೆ 58.34 ಲಕ್ಷ ಮಹಿಳೆಯರು ರೂ 37.31 ಕೋಟಿ ವೆಚ್ಚದ ಶಕ್ತಿ ಯೋಜನೆಯ ಲಾಭ ಪಡೆದಿದ್ದಾರೆ. ಗೃಹಲಕ್ಷ್ಮೀ ಯೋಜನೆಯಲ್ಲಿ 65,346 ಮಹಿಳೆಯರಿಗೆ ರೂ78 ಕೋಟಿ ಅನುದಾನವನ್ನು ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ. ರೂ 22 ಕೋಟಿ ಅನುದಾನದ ಅನ್ನಭಾಗ್ಯ ಯೋಜನೆಯ ಲಾಭ



ಪಡೆದಿದ್ದಾರೆ. ಗೃಹಜ್ಯೋತಿ ಯೋಜನೆಯಲ್ಲಿ 12 ಸಾವಿರಕ್ಕೂ ಹೆಚ್ಚು ವಿದ್ಯುತ್ ಸಂಪರ್ಕಗಳಿಗೆ ರೂ 1.35 ಕೋಟಿ ಅನುದಾನ ನೀಡಲಾಗಿದೆ. ನಿರುದ್ಯೋಗಿ ಪದವೀಧರರಿಗೆ ರೂ 3 ಸಾವಿರ ಮತ್ತು ಡಿಪ್ಲೊಮಾ ಹೊಂದಿದವ–ರಿಗೆ ರೂ 1500 ಧನಸಹಾಯ ನೀಡಲಾಗಿದೆ' ಎಂದರು.

ಜಿಲ್ಲಾಧಿಕಾರಿ ನಿತೇಶ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಜಿ ಸಚಿವ ವೀರಕುಮಾರ ಪಾಟೀಲ, ಚಿಕ್ಕೋಡಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣರಾವ ಚಿಂಗಳೆ, ಜಿಲ್ಲಾ ಪಂಚಾಯತ ಮಾಜಿ ಸದಸ್ಯ ರಾಜೇಂದ್ರ ವಡ್ಡರ, ಸುಪ್ರಿಯಾ ಪಾಟೀಲ, ಸುಮಿತ್ರಾ ಉಗಳೆ ಮಾತನಾಡಿದರು.

ಚಿಕ್ಕೋಡಿ ಉಪವಿಭಾಗಾಧಿಕಾರಿ ಮಹಬೂಬಿ, ನಗರಸಭೆ ಪೌರಾಯುಕ್ತ ಜಗದೀಶ ಹುಲಗೆಜ್ಜಿ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಪಂಕಜ ಪಾಟೀಲ, ಅಣ್ಣಾಸಾಹೇಬ ಹಾವಲೆ, ಬಸವರಾಜ ಪಾಟೀಲ, ರಾಜೇಶ ಕದಮ, ರೋಹನ ಸೇರಿದಂತೆ ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಸಾವಿರಾರು ಸಂಖ್ಯೆಯಲ್ಲಿ ಮಹಿಳಾ ಫಲಾನುಭವಿಗಳು ಇದ್ದರು. ತಹಶೀಲ್ದಾರ್ ಮುಜಫ್ಫರ್ ಬಳಿಗಾರ ಸ್ವಾಗತಿಸಿದರು. ಜಿ.ಜಿ. ಗಳಬಿ, ವಿ.ಸಿ. ವಾಕ್ಚಟ್ಟೆ ಕಾರ್ಯಕ್ರಮ ನಿರೂಪಿಸಿದರು. ತಾಲ್ಲೂಕು ಪಂಚಾಯಿತಿ ಸಿ.ಇ.ಓ. ಸುನೀಲ ಮತಿನ ವಂದಿಸಿದರು.

# ಇಬ್ಬರು ವಿದ್ಯಾರ್ಥಿಗಳ ಸಾವು



ಬೆಂಗಳೂರು: ಈಜಲು ತೆರಳಿದ್ದ ಇಬ್ಬರು ವಿದ್ಯಾರ್ಥಿಗಳು ನೀರಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ನಗರದ ಹೊರವಲಯದ ತಾತಗುಣಿ ಬಳಿಯ ಆಗರ ಕೆರೆಯಲ್ಲಿ ನಡೆದಿದೆ.

ಸ್ನೇಹಿತರ ಜತೆ ಈಜಲು ತೆರಳಿದ್ದಾಗ ದುರ್ಘಟನೆ ನಡೆದಿದೆ. ಕೆಂಗೇರಿ ಉಪನಗರ ಸರ್ಕಾರಿ ಪ್ರೌಢ ಶಾಲೆಯ ಎಸ್ಎಸ್–ಎಲ್‌ಸಿ ವಿದ್ಯಾರ್ಥಿಗಳಾದ ಪೃಥ್ವಿರಾಜ್, ನವೀನ್ ಮೃತರು. ಇವರು ದೊಡ್ಡಬೆಲೆ ಮೂಲದವರು ಎನ್ನಲಾಗಿದ್ದು, ಒಟ್ಟು 11 ವಿದ್ಯಾರ್ಥಿಗಳು ಆಗರ ಕೆರೆಯಲ್ಲಿ ಈಜಲು ತೆರಳಿದ್ದಾಗ, ಇಬ್ಬರು ನೀರಿನಲ್ಲಿ ಮುಳುಗಿದ್ದಾರೆ. ಸ್ಥಳಕ್ಕೆ ಕಗ್ಗಲೀಪುರ ಪೊಲೀಸರು ಮತ್ತು ಅಗ್ನಿ ಶಾಮಕ ದಳ ಆಗಮಿಸಿ ಮೃತದೇಹಗಳನ್ನು ಹೊರತೆಗೆದು ಸರ್ಕಾರಿ ಆಸ್ಪತ್ರೆಗೆ ರವಾನೆ ಮಾಡಿದ್ದಾರೆ.

# ಗೋಕಾಕ: ಅಡುಗೆ ಸಿಬ್ಬಂದಿಗೆ ಬೆಂಕಿ ನಂದಿಸುವ ಪ್ರಾತ್ಯಕ್ಷಿಕೆ

ಗೋಕಾಕ: 'ಶಿಕ್ಷಣ ಮಗುವಿನ ಅವಿಭಾಜ್ಯ ಅಂಗ, ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಪಾಲಕರು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಹಾಕುತ್ತಿದ್ದಾರೆ. ಶಿಕ್ಷಣ ಇಲಾಖೆಗೆ ಶಕ್ತಿಯಾಗಿ ಅಡುಗೆ ಸಿಬ್ಬಂದಿ ಇದ್ದಾರೆ' ಎಂದು ಬಿಇಓ ಜಿ.ಬಿ. ಬಳಗಾರ ಹೇಳಿದರು.

ಮಹಾಲಕ್ಷ್ಮಿ ಸಭಾಂಗಣದಲ್ಲಿ ಬೆಳಗಾವಿ ಜಿಲ್ಲಾ ಪಂಚಾಯಿತಿ, ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗಳು, ಪ್ರಧಾನ ಮಂತ್ರಿ ಪೋಷಣ ಶಕ್ತಿ ನಿರ್ಮಾಣ ಯೋಜನೆ (ಎಂ.ಡಿ.ಎಂ.) ಹಾಗೂ ತಾಲ್ಲೂಕು ಪಂಚಾಯಿತಿ ವತಿಯಿಂದ ಗೋಕಾಕ ವಲಯದ ಅಡುಗೆ ಸಿಬ್ಬಂದಿಗಾಗಿ ಆಯೋಜಿಸಿದ್ದ 'ತರಬೇತಿ ಕಾರ್ಯಾಗಾರ'ದಲ್ಲಿ ಭಾಗವಹಿಸಿ ಅವರು ಮಾತನಾಡಿದರು.



'ಗೋಕಾಕ ವಲಯದಲ್ಲಿ ಬಗೆಬಗೆಯ ಅಡುಗೆ ಮಾಡಿ ಮಕ್ಕಳಿಗೆ ನೀಡುತ್ತಿರುವುದು ಇಡೀ ಜಿಲ್ಲೆಗೆ ಮಾದರಿಯಾಗಿದೆ.

ಇದು ಸಾಕಾರಗೊಳ್ಳಲು ಶಾಲೆಯ ಮುಖ್ಯಾಧ್ಯಾಪಕರು ತನು, ಮನ, ಧನದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಯೋಜನೆ ಅನುಷ್ಠಾನಗೊಳಿಸಲು ಅಡುಗೆ ಸಿಬ್ಬಂದಿ ಹಲವು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಅದನ್ನು ಸಮರ್ಥವಾಗಿ ನಿಭಾಯಿಸುವ ಸಲುವಾಗಿ ಇಲಾಖೆ ಅವರಿಗೆ ತರಬೇತಿ ನೀಡಲು ಮುಂದಾಗಿದ್ದು ತರಬೇತಿಯ ಸದುಪಯೋಗ ಪಡೆದುಕೊಂಡು ಉತ್ತಮವಾಗಿ ಕಾರ್ಯನಿರ್ವಹಿಸಬೇಕು' ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ತುಕಾರಾಮ ಕಾಗಲ್ ಉದ್ಘಾಟಿಸಿದರು. ಸಿಲಿಂಡರ್‌ಗೆ ಬೆಂಕಿ ತಗುಲಿದರೆ ನಂದಿಸುವ ಪ್ರಾತ್ಯಕ್ಷಿಕೆಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಪ್ರದರ್ಶಿಸಿದರು.

ವೇದಿಕೆಯಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮಡ್ಡೆಪ್ಪ ತೋಳಿನವರ, ನಗರಸಭೆ ಮಾಜಿ ಅಧ್ಯಕ್ಷ ಜಯಾನಂದ ಹುಣಚ್ಯಾಳಿ, ಬಿಸಿಯೂಟ ಅಧಿಕಾರಿ ಎ.ಬಿ.ಮಲ್ಲಬನ್ನವರ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಬಸವರಾಜ ಮುರಗೋಡ, ಎಚ್.ಪಿ. ಗ್ಯಾಸ್ ವಿತರಕ ಸಂಸ್ಥೆಯ ಮಲ್ಲಿಕಾರ್ಜುನ ಚುನಮರಿ, ಎಂ.ವಿ. ಬಾಗೆನ್ನವರ, ಜಿ.ಆರ್. ಸನದಿ, ಅಗ್ನಿಶಾಮಕ ದಳದ ಠಾಣಾಧಿಕಾರಿ ಎಸ್.ಎನ್. ಮೆಳವಂಕಿ, ಎಸ್.ಎಂ. ಲೋಕನ್ನವರ, ಮಂಜುನಾಥ್ ಕಡೋಲಿ, ಸಂಜು ನಾಯಕ, ಎಂ.ಎಲ್. ಹಸರಂಗಿ, ಎಸ್.ಎಸ್. ಮಾಳಗಿ ಇದ್ದರು.

# ಶಿಕ್ಷಣದಿಂದ ಮಾತ್ರ ಬದುಕು ಸದೃಢ: ಶಂಕರಾನಂದ ಬನಶಂಕರಿ



ಚಿಕ್ಕೋಡಿ: 'ಅಚಲವಾದ ಗುರಿ ಇಟ್ಟುಕೊಂಡು ಸಾಗಿದರೆ ಬಡತನ, ಸಂಕಟ ಅರ್ಥಹೀನ ಕಾರಣಗಳಾಗುತ್ತವೆ. ಶಿಕ್ಷಣ ಮಾತ್ರ ನಮ್ಮನ್ನು ಸದೃಢರನ್ನಾಗಿ ಮಾಡುತ್ತದೆ' ಎಂದು ರಾಜ್ಯ ಲೆಕ್ಕ ಪರಿಶೋಧಕ ಇಲಾಖೆ ಜಂಟಿ ನಿರ್ದೇಶಕ ಶಂಕರಾನಂದ ಬನಶಂಕರಿ ಹೇಳಿದರು.

ತಾಲ್ಲೂಕಿನ ಮಲಿಕವಾಡ ಗ್ರಾಮದಲ್ಲಿ ಮಂಗಳವಾರ ಮಲ್ಲಿಕಾರ್ಜುನ ಜೀರ್ಣೋದ್ಧಾರ ಸಮಿತಿ ವತಿಯಿಂದ ನಡೆದ ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಕುಂಟು ನೆಪದಲ್ಲಿ ಸ್ಪರ್ಧೆಯಿಂದ ದೂರ ನಿಲ್ಲದೇ ಯಶಸ್ವಿಯಾಗಬೇಕು' ಎಂದು ಯುವಕರಿಗೆ ಕಿವಿಮಾತು ಹೇಳಿದರು.

ಕರ್ನಾಟಕ ಲೆಕ್ಕ ಪರಿಶೋಧನಾ ಇಲಾಖೆಯ ಪ್ರೊಬೇಷನರಿ ಉಪ ನಿರ್ದೇಶಕ ಶೇಖರ ಪೂಜಾರಿ ಮಾತನಾಡಿ, 'ಸ್ಪರ್ಧಾತ್ಮಕ ಪರೀಕ್ಷೆ ದೊಡ್ಡ ವಿಷಯವಲ್ಲ. ನಿರಂತರ ಅಧ್ಯಯನ ಮಾಡಿದರೆ ಸುಲಭವಾಗಿ ಸಾಧಿಸಬಹುದು. ವಾಣಿಜ್ಯ ಇಲಾಖೆಯು ಪದವೀಧರರಿಗೆ ಅಡಿಟ್‌ನಲ್ಲಿ ಸಾಕಷ್ಟು ಅವಕಾಶಗಳು ಇವೆ' ಎಂದು ಹೇಳಿದರು

ಗುರುದತ್ತ ಸಕ್ಕರೆ ಕಾರ್ಖಾನೆಯ ನಿರ್ದೇಶಕ ಬಾಳಾಸಾಹೇಬ ಪಾಟೀಲ, ವಾಯುಪಡೆ ಯೋಧ ರಾಜೇಂದ್ರ ಸುತಾರ, ನಿವೃತ್ತ ಮುಖ್ಯಶಿಕ್ಷಕ ಸುಲೋಚನಾ ಕೋಳಿ ಮುಂತಾದವರು ಮಾತನಾಡಿದರು.

ಮೇಲೆ ಚಿದಾನಂದ ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಅಣ್ಣಾಸಾಹೇಬ ಇಂಗಳೆ, ಮಲಿಕವಾಡ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅನಿತಾ ಇಂಗಳೆ, ಉಪಾಧ್ಯಕ್ಷ ಸಂಭಾಜಿ ಪಾಟೀಲ, ದೇವಸ್ಥಾನ ಸಮಿತಿಯ ವಿಶ್ವನಾಥ ಪಾಟೀಲ, ಶಿವಾನಂದ ಹಿರೇಮಠ, ರಾಜೇಂದ್ರ ಪಾಟೀಲ, ದಿಲೀಪ ಕಾಂಬಳೆ, ಎಂ.ಜಿ. ಸಂಕಪಾಳ, ಸುಭಾಷ ಸಂಕಪಾಳ, ಶಮಾ ಜಮಾದಾರ, ಅನಿತಾ ಅಕ್ಕೋಳೆ, ಲಕ್ಷ್ಮಿ ನಡುವಿನಮನಿ ಮುಂತಾದವರು ವೇದಿಕೆ ಮೇಲಿದ್ದರು.

ಸುಧೀರ ಪಾಟೀಲ ಸ್ವಾಗತಿಸಿದರು. ಚಂದ್ರಕಾಂತ ಶಿರೋಳೆ ನಿರೂಪಿಸಿದರು. ಮಹಾಂತೇಶ ಪಾಟೀಲ ವಂದಿಸಿದರು.

# ಪ್ರವಚನ ಆಲಿಸಿದರೆ ಜೀವನ ಪಾವನ: ಗುರುನಾಥ ಶಾಸ್ತ್ರಿ



ಉಗರಗೋಳ: 'ಅಜ್ಞಾನದ ಅಂಧಕಾರ ಕಳೆದು, ಸುಜ್ಞಾನದ ಮಾರ್ಗವನ್ನು ತೋರುವ ಮಹಾತ್ಮರ ಪುರಾಣ, ಪ್ರವಚನವನ್ನು ನಾವೆಲ್ಲರೂ ಶ್ರದ್ಧೆಯಿಂದ ಆಲಿಸಬೇಕು. ಆಗ ಜೀವನ ಪಾವನವಾಗುತ್ತದೆ' ಎಂದು ಕರಿಕಟ್ಟಿಯ ಗುರುನಾಥ ಶಾಸ್ತ್ರಿ ಹೇಳಿದರು.

ಸವದತ್ತಿ ತಾಲ್ಲೂಕಿನ ಉಗರಗೋಳದಲ್ಲಿ ಶ್ರೀಗುರು ನಿರ್ವಾಣೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ, ಮಾದಾರ ಚನ್ನಯ್ಯ ಜಯಂತ್ಯುತ್ಸವ ಹಾಗೂ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಧರ್ಮವೇದಿಕೆಯಲ್ಲಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮನ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಯಾವುದೇ ಧರ್ಮವು ಶಾಂತಿ–ಸಹೋದರತ್ವ ಭಾವ ಸಾರುತ್ತವೆ. ಹಾಗಾಗಿ ಸಮಾಜದಲ್ಲಿ ಸಹಬಾಳ್ವೆಯಿಂದ ಬದುಕಬೇಕು. ಮಹಾತ್ಮರು ಹೇಳುವ ಆಧ್ಯಾತ್ಮಿಕ ಪ್ರವಚನದ ಸಾರವನ್ನು ಜೀವನದಲ್ಲಿ ಅಳವಡಿಸಿಕೊಂಡು, ಸುಂದರ ಬದುಕನ್ನು ಕಟ್ಟಿಕೊಳ್ಳಬೇಕು' ಎಂದರು.

ನಿರ್ವಾಣೇಶ್ವರ ಮಠದ ಪೀಠಾಧಿಪತಿ ಶ್ರೀಗುರು ಮಹಾಂತ ಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಮಂಜುನಾಥ ಕಾಳಪ್ಪನವರ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ರೇಣವ್ವ ಶಿದ್ದಕ್ಕನವರ, ಬಸನಗೌಡ ಪಾಟೀಲ, ಡಿ.ಡಿ. ನಾಡಗೌಡರ, ಶಿವನಗೌಡ ಗಡಾದಗೌಡ್ರ, ಪರಸಪ್ಪ ಇಮರಾಪೂರ, ಅಪ್ಪು ಕಾಳಪ್ಪನವರ, ಬಸು ಭಜಂತ್ರಿ, ಶೆಂಕ್ರೆಮ್ಮ ಮುದ್ರಗಣಿ, ಯಲ್ಲಪ್ಪಾ ಕೊಪ್ಪದ ಹಾಗೂ ಗ್ರಾಮಸ್ಥರು ಇದ್ದರು.

ಮುತ್ತಯ್ಯ ತೋರಗಲ್‌ಮಠ ಸ್ವಾಗತಿಸಿದರು. ಡಿ.ಎಸ್. ಕೊಪ್ಪದ, ಶಶಿಧರ ಅಂಗಡಿ ನಿರೂಪಿಸಿದರು. ನಂದಕುಮಾರ ಚಂದರಗಿ ವಂದಿಸಿದರು.

# ಒಂದು ಹನಿ ನೀರು ತಮಿಳುನಾಡಿಗೆ ಕೊಡುವುದಿಲ್ಲ: ಸಿಎಂ ಸಿದ್ದರಾಮಯ್ಯ



ಬೆಂಗಳೂರು: ನಗರವು ತೀವ್ರ ನೀರಿನ ಸಮಸ್ಯೆ ಎದುರಿಸುತ್ತಿರುವಾಗಲೂ ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸಲಾಗುತ್ತಿದೆ ಎಂಬ ವಿರೋಧ ಪಕ್ಷದ ಆರೋಪವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತಳ್ಳಿಹಾಕಿದ್ದಾರೆ. ಪ್ರತಿಪಕ್ಷಗಳ ಆರೋಪ ಸುಳ್ಳು ಎಂದ ಸಿದ್ದರಾಮಯ್ಯ, ತಮಿಳುನಾಡಿಗೆ ಒಂದು ಹನಿ ನೀರು ಬಿಟ್ಟಿಲ್ಲ ಎಂದಿದ್ದಾರೆ.

ಚಾಮರಾಜನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿರೋಧ ಪಕ್ಷಗಳ ಹೇಳಿಕೆಗಳೆಲ್ಲವೂ ಸುಳ್ಳು. ಈ ಪರಿಸ್ಥಿತಿಯಲ್ಲಿ ನೀರನ್ನು ಯಾರು ಬಿಡುತ್ತಾರೆ? ತಮಿಳುನಾಡಿಗೆ ಒಂದು ಹನಿ ನೀರು ಕೊಡಲು ಸಾಧ್ಯವಿಲ್ಲ.

ತಮಿಳುನಾಡು ನೀರು ಬಿಡುವಂತೆ ಕೇಳಿಲ್ಲ, ಕರ್ನಾಟಕಕ್ಕೆ ಯಾರೂ ಸೂಚನೆ ನೀಡಿಲ್ಲ ಎಂದು ಸಿಎಂ ಹೇಳಿದರು.

ಅವರು ಕೇಳದೆ ಏಕೆ ನೀರು ಕೊಡುತ್ತಾರೆ? ಅವರಿಗೆ ಕೊಡಲು ನೀರು ಎಲ್ಲಿ ಸಿಗುತ್ತದೆ? ತಮಿಳುನಾಡು ಕೇಳಿದರೂ ಅಥವಾ ಕೇಂದ್ರ ಅಥವಾ ಬೇರೆಯವರು ನೀರು ಬಿಡುವಂತೆ ಆದೇಶ ಕೊಟ್ಟರು ನೀರು ಬಿಡುವ ಪ್ರಶ್ನೆಯೇ ಇಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.

# ವಿವಿಧ ಕ್ಷೇತ್ರಗಳಿಗೆ ಕುರ್ಚಿ ಹಾಗೂ ಸೌಂಡ್ ಸಿಸ್ಟಮ್ ವಿತರಣೆ



ಗೋಕಾಕ: ನಗರದ ಹಿಲ್ ಗಾರ್ಡನ್ ಕಛೇ–ರಿಯಲ್ಲಿ ಸತೀಶ್ ಜಾರಕಿಹೊಳಿ ಫೌಂಡೇಶನ್ ವತಿಯಿಂದ ವಿವಿಧ ಕ್ಷೇತ್ರಗಳಿಗೆ ಸೌಂಡ್ ಸಿಸ್ಟಮ್ ಹಾಗೂ ಕುರ್ಚಿಗಳನ್ನು ಯುವ ನಾಯಕ ರಾಹುಲ್ ಜಾರಕಿಹೊಳಿ ಅವರು ವಿತರಿಸಿದರು.

ಗೋಕಾಕ, ಅರಭಾವಿ, ಬೈಲಹೊಂಗಲ, ರಾಮದುರ್ಗ ತಾಲೂಕಗಳ ವಿವಿಧ ಗ್ರಾಮದ ವಿವಿಧ ಸಮುದಾಯ ಭವನಗಳಿಗೆ, ದೇವಸ್ಥಾನ, ಮಸೀದಿ ಚರ್ಚಗಳಿಗೆ ಕುರ್ಚಿ ಹಾಗೂ ಸೌಂಡ್ ಸಿಸ್ಟಮ್ ಗಳನ್ನು ಯುವ ನಾಯಕ ರಾಹುಲ್ ಜಾರಕಿಹೊಳಿ ಅವರು ವಿತರಿಸಿದರು.

ಈ ಸಂದರ್ಭದಲ್ಲಿ ಉಸ್ತುವಾರಿ ಸಚಿವರಾದ ಪಾಂಡು ಮನ್ನಿಕೇರಿ, ವಿ ಆರ್ ಪರಸನ್ನವರ, ಶಿವು ಪಾಟೀಲ, ವಿನೋದ್ ಡೊಂಗರೆ, ಪ್ರಕಾಶ್ ಬಸಾಪುರೆ, ಮಾರುತಿ ಗುಟಗುದ್ದಿ, ಪಾಂಡು ರಂಗಸುಭೆ ಮುಖಂಡರಾದ ರಾಮಣ್ಣ ಗುಳ್ಳಿ, ಬಸಪ್ಪಾ ಪತ್ತಾರ, ರವಿಂದ್ರ ನಾಯ್ಕರ, ಮಂಜುಗೌಡ ಪಾಟೀಲ, ನಹಿಮ್ ಜಮಾದಾರ, ಸುರೇಶ್ ಮುದ್ದಪ್ಪಗೋಳ , ಮಂಜುಳಾ ರಾಮಗಟ್ಟಿ ಹಾಗೂ ವಿವಿಧ ಕ್ಷೇತ್ರದ ಮುಖಂಡರು ಯುವಕರು ರೈತರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳೊಂದಿಗೆ ಸಂವಾದ




ಬೆಳಗಾವಿ: ವಿದ್ಯಾರ್ಥಿಗಳ ವಿನಿಮಯ ಕಾರ್ಯಕ್ರಮದ ಅಂಗವಾಗಿ ಕಾಹೇರ್ಕೆ ಎಲ್ ಇ ಶುಶ್ರೂಷಾ ವಿಜ್ಞಾನ ಮಹಾವಿದ್ಯಾಲಯ ಬೆಳಗಾವಿ ಮತ್ತು ಸದನ್ಕ್ರಾಸ್ವಿ ಶ್ವವಿದ್ಯಾಲಯ, ಆಸ್ಟ್ರೆಲಿಯಾ ನಡುವಿನ ಒಡಂಬಡಿಕೆ ಪ್ರಕಾರ ಹೊಸ ಕೊಲಂಬಿಯಾ ಯೋಜನೆಯಡಿಯಲ್ಲಿ ಈ ಎರಡು ಸಂಸ್ಥೆಗಳ ನಡುವಿನ ಸಹಕಾರಿ ಶೈಕ್ಷಣಿಕ ಸಂಬಂಧದ ಉದ್ದೇಶದಿಂದ ಕೆಎಲ್‌ಇ ಶುಶ್ರೂಷಾ ವಿಜ್ಞಾನ ಮಹಾವಿದ್ಯಾಲಯ ಬೆಳಗಾವಿಯಲ್ಲಿ 2024ರ ಮಾರ್ಚ್ 11 ರಿಂದ 30ರವರೆಗೆ 10 ನರ್ಸಿಂಗ್ಪದ ವಿವಿದ್ಯಾರ್ಥಿಗಳು ಮತ್ತು ಸದನ್ಕ್ರಾಸ್ವಿ ವಿಶ್ವವಿದ್ಯಾಲಯದ ಇಬ್ಬರು ಅಧ್ಯಾಪಕರುಗಳು ಈ ಚುನಾಯಿತ ಉದ್ಯೋಗದಲ್ಲಿ ಭಾಗವಹಿಸಿದ್ದಾರೆ.

ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಮತ್ತು ಕಾಹೆರನ ಕುಲಪತಿ ಡಾ. ಪ್ರಭಾಕರ ಕೋರೆ ಮತ್ತು ಉಪಕುಲಪತಿ ಡಾ. ನಿತಿನಗಂಗಾನೆ ಅವರು ಆಸ್ಟ್ರೇಲಿಯಾದ ಸದನ್ಕ್ರಾಸ್ವಿ ವಿಶ್ವವಿದ್ಯಾಲಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು ಮತ್ತು ಸಿಬ್ಬಂದಿಯವರನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಕಾಹೆರಕುಲ ಸಚಿವಡಾ. ಎಂಎಸ ಗಣಾಚಾರಿ ಮತ್ತು ಕೆಎಲ್‌ಇ ಶುಶ್ರೂಷಾ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿರೇಶ ಕುಮಾರನಂದಗಾಂವ ಅವರು ಉಪಸ್ಥಿತ–ರಿದ್ದರು.

# ಲೋಕ ಚುನಾವಣೆ ಸಮರಕ್ಕೆ ಖಾಸಗಿ ವಿಮಾನ, ಕಾಪ್ಟರ್ಗೆ ಫುಲ್ ಡಿಮ್ಯಾಂಡ್

ಬೆಂಗಳೂರು: ಸಾರ್ವಜನಿಕರು ಭಾರೀ ಕಾತುರದಿಂದ ನಿರೀಕ್ಷಿಸುತ್ತಿರುವ ಲೋಕಸಭಾ ಚುನಾವಣೆಯ ಕಾವು ದಿನದಿಂದ ದಿನಕ್ಕೆ ಏರುತ್ತಿದೆ. ಲೋಕಸಭಾ ಚುನಾವಣೆಯ ದಿನಾಂಕಗಳು ಮಾರ್ಚ್ 14 ಅಥವಾ ಮಾರ್ಚ್ 17ರೊಳಗೆ ಪ್ರಕಟಣೆಗೊಳ್ಳುವ ಸಾಧ್ಯತೆಗಳಿವೆ. ಹಿಂದಿನ ಸಾರ್ವತ್ರಿಕ ಚುನಾವಣೆಗಳಿಗೆ ಹೋಲಿಸಿದರೆ ಚಾರ್ಟರ್ಡ್ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಬೇಡಿಕೆ ಶೇಕಡಾ 40 ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಲೋಕಸಭೆ ಚುನಾವಣೆ ಘೋಷಣೆ ನಂತರ ದೇಶಾದ್ಯಂತ ರಾಜ–ಕೀಯ ಪಕ್ಷಗಳು ಬಿರುಸಿನ ಪ್ರಚಾರ ಕಾರ್ಯಗಳನ್ನು ಆರಂಭಿಸಲಿವೆ. ರಾಜ–ಕೀಯ ಪಕ್ಷಗಳಿಂದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪ್ರಚಾರ ಸಭೆ, ರ್‍ಯಾಲಿಗಳನ್ನು ಆಯೋಜಿಸಲಾಗುತ್ತದೆ.



ಪಕ್ಷಗಳ ಸ್ಟಾರ್ ಪ್ರಚಾರಕರು, ವರಿಷ್ಠರು ಬಹುಬೇಗ ನಿಗದಿತ ಸ್ಥಳಗಳಿಗೆ ತೆರಳುವುದು ಅನಿವಾರ್ಯ. ಹಾಗಾಗಿ, ಗ್ರಾಮೀಣ ಮತ್ತು ದೂರದ ಸ್ಥಳಗಳಿಗೆ ತೆರಳಲು ವಿಮಾನಗಳ ಬದಲಿಗೆ ಹೆಲಿಕಾಪ್ಟರ್‌ಗಳಿಗೆ ಬೇಡಿಕೆ ಹೆಚ್ಚಿರುತ್ತದೆ ಎಂದು ಹೇಳಿದ್ದಾರೆ.

ಈ ಎಲ್ಲಾ ಕಾರಣಗಳಿಂದ ಖಾಸಗಿ ವಿಮಾನ ಹಾಗೂ ಹೆಲಿಕಾಪ್ಟರ್‌ಗಳ ಬೇಡಿಕೆ ಶೇ.40ರಷ್ಟು ಏರಿಕೆಯಾಗುವ ಸಾಧ್ಯತೆ ಇದೆ. ಇದರಿಂದ ಖಾಸಗಿ ವಿಮಾನಗಳ ಬಾಡಿಗೆ ದರ ಗಂಟೆಗೆ 4.5 ಲಕ್ಷ ರು.ನಿಂದ 5.25 ಲಕ್ಷ ರು. ಇರಲಿದೆ ಎಂದು ವಿಮಾನಯಾನ ಪರಿಣತರು ಅಭಿಪ್ರಾಯಪಟ್ಟಿದ್ದಾರೆ. ಆದ–'ರೆ, ಈ ಬೇಡಿಕೆಗೆ ಹೋಲಿಸಿದರೆ ದೇಶದಲ್ಲಿ ಚಾರ್ಟರ್ಡ್ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಲಭ್ಯತೆ ಕಡಿಮೆ ಇದೆ ಎಂದು ಕ್ಲಬ್ ಒನ್ ಏರ್ ಸಿಇಓ ರಾಜನ್ ಮೆಹ್ರಾ ತಿಳಿಸಿದ್ದಾರೆ.

ದೇಶದಲ್ಲಿ ಪ್ರಸ್ತುತ 112 ಖಾಸಗಿ ವಿಮಾನ ಆಪರೇಟರ್‌ಗಳಿದ್ದು, ಅವರ ಬಳಿ 450ರಿಂದ 500 ವಿಮಾನಗಳಿವೆ. ಅಂದಾಜು 175 ಹೆಲಿಕಾಪ್ಟರ್‌ಗಳಿವೆ. ಬೇಡಿಕೆ ಹೆಚ್ಚಿರುವ ಕಾರಣ ಕೆಲವರು ವಿದೇಶಗಳಿಂದ ಬಾಡಿಗೆ ತರಿಸಿ, ಇಲ್ಲಿ ಬೇಡಿಕೆ ಪೂರೈಸುತ್ತಾರೆ ಎಂದು ಮಾಹಿತಿ ನೀಡಿದರು. ಖಾಸಗಿ ವಿಮಾನಗಳಲ್ಲಿ ಸುಮಾರು 10 ಜನ ಕೂರುವ ವ್ಯವಸ್ಥೆ ಇರುತ್ತದೆ. ಹೆಲಿಕಾಪ್ಟರ್‌ನಲ್ಲಿ 4–5 ಜನ ಕೂರಬಹುದು.

ಬಿಸಿನೆಸ್ ಏರ್‌ಕ್ರಾಫ್ಟ್ ಆಪರೇಟರ್ಸ್ ಅಸೋಸಿಯೇಷನ್ (ಬಿಎಓಎ) ವ್ಯವಸ್ಥಾಪಕ ನಿರ್ದೇಶಕ ಕ್ಯಾಪ್ಟನ್ ಆರ್‌ಕೆ ಬಾಲಿ ಪಿಟಿಐಗೆ ಮಾತನಾಡಿ, ಲೋಕಸಭೆ ಚುನಾವಣೆಯ ಸಮಯದಲ್ಲಿ ಖಾಸಗಿ ಚಾರ್ಟರ್ಡ್ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಬೇಡಿಕೆ ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಶೇಕಡಾ 30 ರಿಂದ 40 ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ. 2019ರಲ್ಲಿ ವಿಮಾನಗಳ ಮೇಲೆ ಬಿಜೆಪಿ 250 ಕೋಟಿರು. ಬಳಕೆ: 2019ರ ಲೋಕಸಭೆ ಚುನಾವಣೆ ಸಮಯದಲ್ಲಿ ಬಿಜೆಪಿ ಚುನಾವಣೆ ಪ್ರಚಾರದ ಕಾರ್ಯಕ್ಕೆಂದೇ ವಿಮಾನ ಹಾಗೂ ಹೆಲಿಕಾಪ್ಟರ್ ಬಾಡಿಗೆ ಪಡೆಯಲು ಒಟ್ಟು 250 ಕೋಟಿ ರು. ವೆಚ್ಚ ಮಾಡಿತ್ತು ಎಂದು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ವರದಿಯಲ್ಲಿ ತಿಳಿಸಿತ್ತು.

# ಸಚಿವ ಸತೀಶ್ ಜಾರಕಿಹೊಳಿ ನೇತೃತ್ವದಲ್ಲಿ ಸಂಧಾನ ಸಭೆ ಯಶಸ್ವಿ; ಧರಣಿ ಕೈ ಬಿಟ್ಟ ರೈತರು

ಬೆಳಗಾವಿ: ಹಿಡಕಲ್ ಡ್ಯಾಮ್ ಹಿನ್ನೀರಿಗೆ ಜಮೀನು ಕಳೆದುಕೊಂಡ ರೈತರು ನೀರಾವರಿ ಇಲಾಖೆಯಿಂದ ಪರಿಹಾರ ನೀಡುವಂತೆ ಆಗ್ರಹಿಸಿ ಬೆಳಗಾವಿ ನೀರಾವರಿ ಇಲಾಖೆ ಕಚೇ–ರಿಗೆ ಸೋಮವಾರದಿಂದ ಮುತ್ತಿಗೆ ಹಾಕಿ ನಡೆಸುತ್ತಿರುವ ಧರಣಿಯನ್ನು ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರ ಸೂಚನೆ ಮೇರೆಗೆ ಮಾಸ್ತಿಹೊಳಿ ಗ್ರಾಮದ ರೈತರು ಧರಣಿಯನ್ನು ಇಂದು ಕೈ ಬಿಟ್ಟಿದ್ದಾರೆ.

ಚನ್ನಮ್ಮಾ ವೃತ್ತದಲ್ಲಿ ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ ಮಾಸ್ತಿಹೊಳಿ ರೈತರು 2 ಗಂಟೆಗಳ ಕಾಲ ಪ್ರತಿಭಟನೆ ನಡೆಸಿದ್ದರು. ನಂತರ ಅಲ್ಲಿಂದ ನೀರಾವರಿ ಇಲಾಖೆ ಕಚೇರಿವರಗೂ



ಪ್ರತಿಭಟನಾ ಮೆರವಣಿಗೆ ನಡೆಸಿದ ರೈತರು ಸಿವಿಲ್ ಮುಖ್ಯ ಇಂಜಿನಿಯರ್ ಬಿ. ಆರ್. ರಾಠೋಡ್ ಕಚೇರಿಗೆ ಮುತ್ತಿಗೆ ಹಾಕಿ ಹರಿಹಾಯ್ದರು. ಅಲ್ಲದೇ ಭ್ರಷ್ಟ ಅಧಿಕಾರಿಗಳಾದ ಚೀಪ್ ಇಂಜಿನಿಯರ್ ಬಿ.ಆರ್. ರಾಠೋಡ, ಸಿ.ಎ.ಓ ಔದ್ರಾಮ, ನೀರಾವರಿ ನಿಗಮ ಎಂಡಿ ರಾಜೇಶ್ ಅಮೀನಬಾವಿ, ರವೀಂದ್ರ ತಾಳೂರ, ಎಸ್.ಎಂ. ಮಡಿವಾಲೆ, ಎಸ್ . ಆರ್ ಕಾಮತ ಅವರನ್ನು ಶೀಘ್ರವೇ ಅಮಾನತು ಮಾಡುವಂತೆ ರೈತರು ಪಟ್ಟು ಹಿಡಿದ್ದರು.

ಸೋಮವಾರ ಸಂಜೆ ಜಿಲ್ಲಾಧಿಕಾ–ರಿಗಳು ಸಂಧಾನ ಸಭೆ ನಡೆಸಿದರೂ ರೈತರು ಪ್ರತಿಭಟನೆ ಮುಂದುವರೆಸಿದ್ದರು. ಇಂದು ಸಂಜೆ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ನೀರಾವರಿ ನಿಗಮ ಎಂಡಿ ರಾಜೇಶ್ ಅಮೀನಬಾವಿ, ಜಿಲ್ಲಾಧಿಕಾರಿ ನಿತೇಶ್ ಪಾಟೀಲ್, ಸಿವಿಲ್ ಮುಖ್ಯ ಇಂಜಿನಿಯರ್ ಬಿ. ಆರ್. ರಾಠೋಡ, ರೈತ ಮುಖಂಡ ಬಾಳೇಶ್ ಮಾವನೂರೆ, ಮಾಸ್ತಿಹೊಳಿ ಗ್ರಾಮ ಸೇರಿದಂತೆ ವಿವಿಧ ಗ್ರಾಮಗಳ ರೈತರೊಂದಿಗೆ ಸಭೆ ನಡೆಸುವ ಮೂಲಕ ಸಮಸ್ಯೆ ಪರಿಹರಿಸಲು ಭರವಸೆ ನೀಡಿದ್ದು, ರೈತರು ಪ್ರತಿಭಟನೆ ವಾಪಸ್ ಪಡೆದಿದ್ದಾರೆ.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವ ಸತೀಶ್ ಜಾರಕಿಹೊಳಿ ಅವರು, ಹಿಡಕಲ್ ಡ್ಯಾಮ್ ಹಿನ್ನೀರಿಗೆ ಜಮೀನು ಕಳೆದುಕೊಂಡ ರೈತರು ಸಮಸ್ಯೆಗೆ ಸಿಲುಕಿದ್ದು, ಈ ಸಮಸ್ಯೆ ಬಗ್ಗೆ ನನ್ನ ಗಮನಕ್ಕೂ ಇದೆ. ಆದರೆ ಅಧಿಕಾರಿಗಳ ಬಳಿ 50 ವರ್ಷಗಳ ಹಿಂದನ ದಾಖಲೆಗಳು ಇಲ್ಲಾ. ಹೀಗಾಗಿ ಕೆಲ ರೈತರ ದಾಖಲೆಗಳು ಇದ್ದು, ಕೆಲ ರೈತರ ದಾಖಲೆಗಳಿಲ್ಲ. ಆದ್ದ–ರಿಂದ ಅಧಿಕಾರಿಗಳಿಗೆ ವಸ್ತುಸ್ಥಿತಿ ಇದ್ದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಾಲ್ಕೈದು ದಿನ ಸಮಯ ನೀಡಿದ್ದೇವೆ. ಈ ಕೇಸ್‌ಗೆ ಸಂಬಂಧಿಸಿದಂತೆ ಶೀಘ್ರವೇ ಎಸ್.ಎಲ್.ಓ ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಸರ್ವೇ ಮಾಡಿ ವರದಿ ನೀಡುವಂತೆ ಸೂಚಿಸಿದ್ದೇನೆಂದು ತಿಳಿಸಿದ ಅವರು, ಸರ್ಕಾರಕ್ಕೆ ವರದಿ ಒಪ್ಪಿಸಿದ ನಂತರ ಸಚಿವ ಸಂಪುಟದಲ್ಲಿ ಚರ್ಚಿಸಿ ರೈತರ ಸಮಸ್ಯೆ ಪರಿಹರಿಸುತ್ತೇವೆಂದು ತಿಳಿಸಿದರು.

# ಬೆಳಗಾವಿ: ಕೆಲಸಕ್ಕೆ ರಜೆ ಹಾಕಿ ಬಾರ್‌ನಲ್ಲಿ ಮದ್ಯ ಮಾರಾಟ ಮಾಡಿದ ಮುಖ್ಯ ಪಶು ವೈದ್ಯಾಧಿಕಾರಿ



ಬೆಳಗಾವಿ: ವೈದ್ಯೋ ನಾರಾಯಣೋ ಹರಿಃ ಎಂಬ ಮಾತಿನಂತೆ ವೈದ್ಯನಾದವನು ದೇವರಿಗೆ ಸಮಾನ. ಆದರೆ ಇಲ್ಲೊಬ್ಬ ಪಶು ವೈದ್ಯಾಧಿಕಾರಿ ಮಾಡುವ ಕೆಲಸ ನೋಡಿದರೆ ಎಂಥವರೂ ಸಹ ಕೆದರಿ ಕೆಂಡವಾಗೋದು ಪಕ್ಕಾ. ಯಾಕಂದ್ರೆ ಮೊದಲೇ ಬರಗಾಲ. ಈ ಬರಗಾಲದಲ್ಲಿ ರೈತರ ಕೈಗೆ ಸಿಗದ ತಾಲೂಕು ಮುಖ್ಯ ಪಶು ವೈದ್ಯಾಧಿಕಾರಿ ಮದ್ಯ ಮಾರಾಟ ಮಾಡಿದ್ದಾರೆ ಎಂಬ ಆರೋಪ ರಾಯಬಾಗದಲ್ಲಿ ಕೇಳಿ ಬಂದಿದೆ.

ಡಾ.ಸಚೀನ ಸೌದಲಗಿ ರಾಯಬಾಗದ ಮುಖ್ಯ ಪಶು ವೈದ್ಯಾಧಿಕಾ–ರಿಯಾಗಿದ್ದು, ಕೆಲಸಕ್ಕೆ ರಜೆ ಹಾಕಿ ಮದ್ಯದಂಗಡಿಯಲ್ಲಿ ಕೆಲಸ ಮಾಡುತ್ತಿರುವ ಆರೋಪದ ಜೊತೆಗೆ ದೃಶ್ಯ ಸಮೇತ ಬೆಳಕಿಗೆ ಬಂದಿದೆ. ಕಳೆದ ಫೆ.28 ರಂದು ಕೆಲಸಕ್ಕೆ ರಜೆ ಹಾಕಿ ಬಾರ್‌ನಲ್ಲಿ ಕೆಲಸ ಮಾಡಿರುವ ವಿಡಿಯೋ ಇದು ಎನ್ನಲಾಗಿದೆ. ಸದ್ಯ ಈ ಘಟನೆ ಭಾರೀ ಚರ್ಚೆಗೆ ಗ್ರಾಸವಾಗಿದೆ. ರೈತರು ಕಿಡಿಕಾರಿದ್ದಾರೆ. ಬರಗಾಲದ ಸಮಯದಲ್ಲೂ ತಾಲೂಕು ಮುಖ್ಯ ಪಶು ವೈದ್ಯಾಧಿಕಾರಿ ವರ್ತನೆಗೆ ಬೇಸರ ವ್ಯಕ್ತಪಡಿಸಿದ್ದಾರೆ.

# ಗಡಿ ಮತ್ತು ನದಿಗಳ ಸಂರರಕ್ಷಣಾ ಆಯೋಗದ ಸಭೆ

## ಗಡಿ ಸಮಸ್ಯೆ-ಅಹವಾಲು ಸ್ವೀಕರಿಸಲು ಸುವರ್ಣ ಸೌಧದಲ್ಲಿ ಗಡಿ ಆಯೋಗದ ಕಚೇರಿ ಸ್ಥಾಪನೆ: ಶಿವರಾಜ್ ಪಾಟೀಲ

ಬೆಳಗಾವಿ: ಸಾರ್ವಜನಿಕರು, ಕನ್ನಡಪರ ಸಂಘಟನೆಗಳ ಬೇಡಿಕೆಯಂತೆ ಗಡಿ ಹಾಗೂ ನದಿಗಳ ರಕ್ಷಣೆಗೆ ಸಂಬಂಧಿಸಿದಂತೆ ಸ್ಥಳಿಯ ಸಮಸ್ಯೆಗಳು ಮತ್ತು ಅಹವಾಲುಗಳನ್ನು ಸ್ವೀಕರಿಸಲು ಅನುಕೂಲವಾಗುವಂತೆ ಗಡಿ ಆಯೋಗದ ಕಚೇರಿಯೊಂದನ್ನು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸ್ಥಾಪಿಸಲಾಗುವುದು ಎಂದು ಕರ್ನಾಟಕ ಗಡಿ ಮತ್ತು ನದಿಗಳ ಸಂರಕ್ಷಣಾ ಆಯೋಗದ ಅಧ್ಯಕ್ಷರಾದ ಶಿವರಾಜ್ ಪಾಟೀಲ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ (ಮಾ.13) ನಡೆದ ಕರ್ನಾಟಕ ಗಡಿ ಮತ್ತು ನದಿಗಳ ರಕ್ಷಣಾ ಆಯೋಗದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗಡಿ ಮತ್ತು ನದಿಗಳ ಆಯೋಗಕ್ಕೆ ಸುವರ್ಣ ವಿಧಾನಸೌಧದಲ್ಲಿ ಎರಡು ಕೊಠಡಿಗಳನ್ನು ನೀಡುವುದಾಗಿ ಜಿಲ್ಲಾಧಿಕಾ-ರಿಗಳು ತಿಳಿಸಿದ್ದಾರೆ. ಸದರಿ ಆಯೋಗವನ್ನು ಪುನರ್ ರಚನೆಗೆ ಕ್ರಮ ಕೈಗೊಂಡು ಶೀಘ್ರವೇ ಸುವರ್ಣ ಸೌಧದಲ್ಲಿ ಕಚೇರಿ ಸ್ಥಾಪಿಸಿ ಕಚೇ-ರಿಗೆ ಆಯೋಗದ ಸ್ಥಳೀಯ ಸದಸ್ಯರೊಬ್ಬರನ್ನು ನಿಯೋಜಿಸುವುದರ ಮೂಲಕ ಸ್ಥಳೀಯ ಗಡಿ ಹಾಗೂ ನದಿಗಳ ರಕ್ಷಣೆಗೆ ಸಂಬಂಧಿಸಿದಂತೆ ಜನರ, ಸಂಘ-ಸಂಸ್ಥೆಗಳ ಅಹವಾಲುಗಳನ್ನು ಸ್ವೀಕರಿಸಲು ಕ್ರಮ ಕೈಗೊಳ್ಳಲಾಗುವದು ಎಂದರು.

ಗಡಿ ಸಮಸ್ಯೆಗಳನ್ನು ಸಂವಿಧಾನಾತ್ಮಕವಾಗಿ ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಿರಂತರವಾಗಿ ನಡೆದಿರುತ್ತವೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಪಟ್ಟಿಯಾದ ಬಳಿಕ ಸಮರ್ಥವಾಗಿ ವಾದ ಮಂಡನೆಗೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಗಡಿ ಸಮಸ್ಯೆಗಳನ್ನು ಸಂವಿಧಾನಾತ್ಮಕವಾಗಿ ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಿರಂತರವಾಗಿ ನಡೆದಿರುತ್ತವೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಪಟ್ಟಿಯಾದ ಬಳಿಕ ಸಮರ್ಥವಾಗಿ ವಾದ ಮಂಡನೆಗೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಕಾನೂನಾತ್ಮಕ ಹಾಗೂ ರಾಜಕೀಯವಾಗಿ ಹೋರಾಟಕ್ಕೆ ಸಂಬಂಧಿಸಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳ ಸಲಹೆಗಳು ಮತ್ತು ಹಕ್ಕೊತ್ತಾಯಗಳನ್ನು ಸರಕಾರದ ಗಮನಕ್ಕೆ ತರುವ ಮೂಲಕ ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುವುದು. ಮಹಾರಾಷ್ಟ್ರ ಮಾದರಿಯಲ್ಲಿ ಗಡಿ ಸಚಿವರನ್ನು ನೇಮಕ ಮಾಡುವ ಬಗ್ಗೆ ಸರಕಾರದ ಗಮನಸೆಳೆಯಲಾಗುವುದು ಎಂದು ಶಿವರಾಜ್ ಪಾಟೀಲ ಭರವಸೆಯನ್ನು ನೀಡಿದರು.

ನಮ್ಮೆಲ್ಲರ ಉದ್ದೇಶ ಒಂದೇ; ಭಾವನೇ ಹಾಗೂ ಮಾಡಬೇಕಾದ ಕೆಲಸವೂ ಒಂದೇ ಆಗಿರುವುದರಿಂದ ಎಲ್ಲರೂ ಸೇರಿಕೊಂಡು ಸರಿಯಾದ ದಿಸೆಯಲ್ಲಿ ಕೆಲಸ ಮಾಡೋಣ. ಸಮಸ್ಯೆ ಹೊಸದಲ್ಲ; ವಿಳಂಬವೇ ದೊಡ್ಡ



ಸಮಸ್ಯೆಯಾಗಿದೆ. ಕನ್ನಡಪರ ಸಂಘಟನೆಗಳ ಸಲಹೆಗಳ ಆಧಾರದ ಮೇಲೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ನದಿಗಳು ಮತ್ತು ಗಡಿಗಳ ಸಮಸ್ಯೆ ಎದುರಾದಾಗ ಕಾನೂನಾತ್ಮಕವಾಗಿ ಯಾವ ರೀತಿಯಲ್ಲಿ ರಕ್ಷಣೆ ಮಾಡಬೇಕು ಎಂಬುದನ್ನು ಸರಕಾರಕ್ಕೆ ಸಲಹೆ ರೂಪದಲ್ಲಿ ವರದಿ ನೀಡುವ ಕೆಲಸವನ್ನು ಆಯೋಗ ಮಾಡಲಿದೆ ಎಂದು ತಿಳಿಸಿದರು.

ಯಾವುದೇ ಕಾನೂನುಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುವಲ್ಲಿ ಅಧಿಕಾರಿಗಳ ಪಾತ್ರ ಅತೀ ಮಹತ್ವದಾಗಿದ್ದು ಅದರಂತೆ ಬೆಳಗಾವಿಯಲ್ಲಿ ಜಿಲ್ಲಾಧಿಕಾರಿಗಳು ಸೇರಿದಂತೆ ಎಲ್ಲ ಅಧಿಕಾರಿಗಳು ಕನ್ನಡ ನಾಡು ನುಡಿಗೆ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿರುವುದು ಸಂತಸದ ಸಂಗತಿಯಾಗಿದೆ.

**ಕನ್ನಡ ರಾಜ್ಯೋತ್ಸವಕ್ಕೆ ಅನುದಾನ:**

ಬೆಳಗಾವಿಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚ-ರಿಸಲಾಗುತ್ತಿದೆ. ರಾಜ್ಯೋತ್ಸವವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಆಚ-ರಿಸಲು ಸರಕಾರದಿಂದ ಹೆಚ್ಚಿನ ಅನುದಾನ ದೊರಕಿಸಲು ಶಿಫಾರಸ್ಸು ಮಾಡಲಾಗುವುದು ಎಂದು ಶಿವರಾಜ ಪಾಟೀಲ ತಿಳಿಸಿದರು.

ಕನ್ನಡ ಪರ ಹೊರಾಟಗಾರರಾದ ಮಹದೇವ ತಳವಾರ ಮಾತನಾಡಿ, ಮಹಾತ್ಮಾ ಫುಲೆ ಆರೋಗ್ಯ ಯೋಜನೆ ಅನುಷ್ಠಾನಕ್ಕಾಗಿ ಗಡಿಭಾಗದಲ್ಲಿ ಕಚೇರಿ ಆರಂಭಿಸಿರುವಾಗ ಸರಕಾರದಿಂದ ಯಾವುದೇ ಕ್ರಮವಿಲ್ಲ; ಕನ್ನಡ ನಾಮಫಲಕ ಹಾಕಿಸಲು ಹೋರಾಟ ಆರಂಭಿಸಿದರೆ ಪ್ರಕರಣ ದಾಖಲಿಸುತ್ತಾರೆ; ಕನ್ನಡ ಮಾಧ್ಯಮಗಳ ಶಾಲೆಗಳಲ್ಲಿ ಕೊಠಡಿ ಕೊರತೆಯಿದೆ ಎಂಬುದನ್ನು ಮಹದೇವ ತಳವಾರ ಆಯೋಗದ ಅಧ್ಯಕ್ಷರ ಗಮನಸೆಳೆದರು.

ಸ್ಥಳೀಯ ಕನ್ನಡಪರ, ರೈತಪರ ಸಂಘಟನೆಗಳ ಜತೆ ಚರ್ಚಿಸಿ ಗಡಿ ಆಯೋಗದ ಪುನರ್ ರಚನೆ ಮಾಡುವಂತೆ ತಳವಾರ ಒತ್ತಾಯಿಸಿದರು.

ಅಶೋಕ ಚಂದರಗಿ ಅವರು ಮಾತನಾಡಿ, ಮಹಾತ್ಮಾ ಫುಲೆ ಆರೋಗ್ಯ ಯೋಜನೆಯನ್ನು ಗಡಿಭಾಗದ ಐದು ಜಿಲ್ಲೆಗಳಲ್ಲಿ ಮಹಾರಾಷ್ಟ್ರ ಸರಕಾರ ಅನುಷ್ಠಾನ ಮಾಡುತ್ತಿದೆ. ಬೆಳಗಾವಿಯಲ್ಲಿ ಸೇವಾಕೇಂದ್ರಗಳನ್ನು ಆರಂಭಿಸುವ ಮೂಲಕ ಆಟಾಟೋಪ ಹಾಗೂ ಕುತಂತ್ರಗಳನ್ನು ಮಾಡಲಾಗುತ್ತಿದೆ. ಇಷ್ಟೆಲ್ಲಾ ಬೆಳವಣಿಗೆಯಾದರೂ ಸರಕಾರ ಅಥ-'ವಾ ಆಯೋಗದ ವತಿಯಿಂದ ಯಾವುದೇ ಪ್ರತಿಕ್ರಿಯೆ ಬಾರದಿರುವುದಕ್ಕೆ ಕನ್ನಡಪರ ಹೋರಾಟಗಾರ ಅಶೋಕ ಚಂದರಗಿ ಅಸಮಾಧಾನ ವ್ಯಕ್ತಪಡಿಸಿದರು.

**ಎಂ.ಇ.ಎಸ್.-ಶಿವಸೇನೆ ನಿಷೇಧಕ್ಕೆ ಒತ್ತಾಯ**

ಕನ್ನಡಪರ ಸಂಘಟನೆಯ ಮತ್ತೋರ್ವ ಮುಖಂಡ ದೀಪಕ ಗುಡಗನಟ್ಟಿ ಮಾತನಾಡಿ, ಆಯೋಗದ ವತಿಯಿಂದ ಪ್ರತಿ ಮೂರು ತಿಂಗಳಿಗೊಮ್ಮೆ ನಿಯಮಿತವಾಗಿ ಸಭೆಗಳನ್ನು ನಡೆಸಿದರೆ ಗಡಿಭಾಗದ ಸಮಸ್ಯೆಗಳನ್ನು ಸರಕಾರದ ಗಮನಕ್ಕೆ ತರುವುದು ಅನುಕೂಲವಾಗುತ್ತದೆ ಎಂದು ಒತ್ತಾಯಿಸಿದರು.

ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಬಳಕೆ ಮಾಡಲು ಕ್ರಮ ಕೈಗೊಳ್ಳಬೇಕು. ಪದೇ ಪದೆ ಗಡಿಭಾಗದಲ್ಲಿ ಭಾಷಾದ್ವೇಷ ಮೂಡಿಸುತ್ತಿರುವ ಎಂ.ಇ.ಎಸ್ ಹಾಗೂ ಶಿವಸೇನೆಯನ್ನು ರಾಜ್ಯದಲ್ಲಿ ನಿಷೇಧಿಸಬೇಕು ಎಂದು ಗುಡಗನಟ್ಟಿ ಒತ್ತಾಯಿಸಿದರು.

ಶ್ರೀನಿವಾಸ್ ತಾಳೂರಕರ ಅವರು, ಫಲಕಗಳಲ್ಲಿ ಶೇ.60 ರಷ್ಟು ಕನ್ನಡ ಭಾಷೆ ಬಳಸಬೇಕು ಎಂಬ ಅಧಿಸೂಚನೆ ಹೊರಡಿಸಿರುವುದಕ್ಕೆ ಸಂತಸ ವ್ಯಕ್ತಪಡಿಸಿದ ಶ್ರೀನಿವಾಸ್ ತಾಳೂರಕರ ಅವರು, ಕನ್ನಡ ಬಳಕೆ ಕಡ್ಡಾಯವಾಗುವಂತೆ ಅಧಿಕಾರಿಗಳು ಗಮನಹರಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಮಂಗಲಾ ಮೆಟಗುಡ್ ಅವರು, ಗಡಿಭಾಗದ ಅಂಗನವಾಡಿ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷೆ ಬಲ್ಲ ಶಿಕ್ಷಕರನ್ನು ನೇಮಿಸಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಆಯೋಗದ ಸದಸ್ಯರುಗಳಾದ ಜಿನದತ್ತ ದೇಸಾಯಿ, ಎಸ್.ಎಂ.ಕುಲಕರ್ಣಿ, ಜಿಲ್ಲಾಧಿಕಾರಿ ನಿತೇಶ್ ಪಾಟೀಲ, ಜಿ.ಪಂ. ಸಿ.ಇ.ಓ ರಾಹುಲ್ ಶಿಂಧೆ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಡಿ.ಸಿ.ಪಿ. ರೋಹನ್ ಜಗದೀಶ್, ಮಹಾನಗರ ಪಾಲಿಕೆಯ ಆಯುಕ್ತರಾದ ಪಿ.ಎನ್.ಲೋಕೇಶ್, ಅಪರ ಜಿಲ್ಲಾಧಿಕಾರಿ ವಿಜಯಕುಮಾರ್ ಹೊನಕೇರಿ, ಸೇ-ರಿದಂತೆ ವಿವಿಧ ಕನ್ನಡಪರ ಸಂಘನೆಗಳ ಪದಾಧಿಕಾರಿಗಳು, ವಿವಿಧ ಕನ್ನಡ ಪರ ಹೋರಾಟಗಾರರು ಉಪಸ್ಥಿತರಿದ್ದರು.

## ಸ್ಥಿರಾಸ್ತಿಗಳ ಪತ್ರಗಳ ನೋಂದಣಿಗೆ ಅವಕಾಶ

ಬೆಳಗಾವಿ: ಬೆಳಗಾವಿ ಜಿಲ್ಲಾ ನೋಂದಣಾಧಿಕಾರಿಗಳ ವ್ಯಾಪ್ತಿಯಲ್ಲಿನ ನೋಂದಣಿ ಕಛೇರಿಗಳಲ್ಲಿ (ಯಾವುದೇ ಸ್ಥಳದಲ್ಲಿ ನೋಂದಣಿ) any where Registration ವ್ಯವಸ್ಥೆಯನ್ನು ಮಾ. 14 ರಿಂದ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಎಲ್ಲ 17 ಉಪ ನೋಂದಣಿ ಕಛೇ-ರಿಗಳ ವ್ಯಾಪ್ತಿಯ ಸ್ಥಿರಾಸ್ತಿಗಳ ಪತ್ರಗಳನ್ನು ಬೆಳಗಾವಿ ಜಿಲ್ಲೆಯ 17 ಉಪ ನೋಂದಣಿ ತಮ್ಮ ಹತ್ತಿರದ ಕಚೇರಿಯಲ್ಲಿ ನೋಂದಣಿ ಮಾಡಿಸಬಹುದು ಎಂದು ಬೆಳಗಾವಿ ಜಿಲ್ಲಾ ನೋಂದಣಿ ಅಧಿಕಾ-ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುಡಿಯುವ ನೀರಿನ ಪೂರೈಕೆ: ಸಹಾಯವಾಣಿ ಕೇಂದ್ರ ಆರಂಭ

ಬೆಳಗಾವಿ: ಮೂಡಲಗಿ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಯಾದರೆ ತಾಲೂಕ ಪಂಚಾಯತ ಕಚೇರಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ದಾಖಲಾಗುವ ದೂರುಗಳನ್ನು ಸ್ವೀಕ-ರಿಸಲು ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದೆ.

ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ 08334-200063 ಈ ಸಹಾಯವಾಣಿಗೆ ಸಂಪರ್ಕಿಸಬುದು ಎಂದು ಮೂಡಲಗಿ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಕಲಚೇತನರ ವ್ಯಕ್ತಿಗಳಿಂದ ಅರ್ಜಿ ಆಹ್ವಾನ

ಬೆಳಗಾವಿ: ವಿಕಲಚೇತನರ ಹಾಗೂ ಹಿರಿಯ ನಾಗ-ರಿಕರ ಸಬಲೀಕರಣ ಇಲಾಖೆಯ ಆಧಾರ ಯೋಜನೆಯ ಮಾರ್ಗಸೂಚಿಯನ್ವಯ, ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಲ್ಲಿ ವಿಕಲಚೇತನರಿಗಾಗಿ ಶ್ರಮಿಸುತ್ತಿರುವ ಸ್ವಯಂ-ಸೇವಾ ಸಂಸ್ಥೆಯ ಒಬ್ಬರು ಪ್ರತಿನಿಧಿ ಹಾಗೂ ವಿಕಲಚೇತನರಿಗಾಗಿ ಶ್ರಮಿಸುತ್ತಿರುವ ಒಬ್ಬರು ವಿಕಲಚೇತನ ವ್ಯಕ್ತಿಯನ್ನು 2 ವರ್ಷದ ಅವಧಿಗೆ ಆಯ್ಕೆ ಸಮಿತಿಯ ಸದಸ್ಯರನ್ನಾಗಿ ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ನಾಮನಿರ್ದೇಶನ ಮಾಡಬೇಕಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ವಿಕಲಚೇತನರಿಗಾಗಿ ಶ್ರಮಿಸುತ್ತಿರುವ ಸ್ವಯಂ-ಸೇವಾ ಸಂಸ್ಥೆಗಳು ಹಾಗು ವಿಕಲಚೇತನ-ರಿಗಾಗಿ ಶ್ರಮಿಸುತ್ತಿರುವ ವಿಕಲಚೇತನ ವ್ಯಕ್ತಿಗಳಿಂದ ಮರು ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಅರ್ಹ ಸಂಸ್ಥೆ ಹಾಗೂ ವಿಕಲಚೇತನ ವ್ಯಕ್ತಿಗಳು ಏ. 12 ಒಳಗಾಗಿ ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ಜಿಲ್ಲಾ ಅಂಗವಿಕಲರ ಕಛೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಛೇರಿ ಅಥವಾ ಆಯಾ ತಾಲೂಕಿನ ಎಂ.ಆರ್.ಡಬ್ಲ್ಯೂ. ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಬೆಳಗಾವಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯಂತ್ರಚಾಲಿತ ದ್ವಿಚಕ್ರ ವಾಹನ ವಿಕಲಚೇತನರಿಗೆ ಅರ್ಜಿ ಆಹ್ವಾನ

ಬೆಳಗಾವಿ: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಯಂತ್ರಚಾಲಿತ ದ್ವಿಚಕ್ರ ವಾಹನ ಯೋಜನೆಯ ಮಾರ್ಗಸೂಚಿಯನ್ವಯ, ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಲ್ಲಿ ವಿಕಲಚೇತನರಿಗಾಗಿ ಶ್ರಮಿಸುತ್ತಿರುವ ಸ್ವಯಂ-ಸೇವಾ ಸಂಸ್ಥೆಯ ಒಬ್ಬರು ಪ್ರತಿನಿಧಿ ಹಾಗೂ ವಿಕಲಚೇತನರಿಗಾಗಿ ಶ್ರಮಿಸುತ್ತಿರುವ ಒಬ್ಬರು ವಿಕಲಚೇತನ ವ್ಯಕ್ತಿಯನ್ನು 2 ವರ್ಷದ ಅವಧಿಗೆ ಆಯ್ಕೆ ಸಮಿತಿಯ ಸದಸ್ಯರನ್ನಾಗಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಾಮನಿರ್ದೇಶನ ಮಾಡಬೇಕಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ವಿಕಲಚೇತನರಿಗಾಗಿ ಶ್ರಮಿಸುತ್ತಿರುವ ಸ್ವಯಂ-ಸೇವಾ ಸಂಸ್ಥೆಗಳು ಹಾಗು ವಿಕಲಚೇತನ-ರಿಗಾಗಿ ಶ್ರಮಿಸುತ್ತಿರುವ ವಿಕಲಚೇತನ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಸಂಸ್ಥೆ ಹಾಗೂ ವಿಕಲಚೇತನ ವ್ಯಕ್ತಿಗಳು ಏ. 12 ಒಳಗಾಗಿ ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ಜಿಲ್ಲಾ ಅಂಗವಿಕಲರ ಕಛೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಛೇರಿ ಅಥವಾ ಆಯಾ ತಾಲೂಕಿನ ಎಂ.ಆರ್.ಡಬ್ಲ್ಯೂ. ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಬೆಳಗಾವಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಿತ್ರದುರ್ಗ ಕಾಂಗ್ರೆಸ್ ಟಿಕೆಟ್ ವಿನಯ ತಿಮ್ಮಾಪೂರಗೆ ನೀಡಲು ಆಗ್ರಹ

ಮುಧೋಳ : ಲೋಕಸಭೆಗೆ ನಡೆಯಲಿರುವ ಚುನಾವಣೆಗೆ ಚಿತ್ರದುರ್ಗ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ವತಿಯಿಂದ ಯುವಧುರೀಣ ವಿನಯ.ಆರ್.ತಿಮ್ಮಾಪೂರ ಅವರಿಗೆ ನೀಡಬೇಕೆಂದು ಮುಧೋಳ ತಾಲೂಕಾ ಮಾದಿಗ ಸಮಾಜದಿಂದ ಕಾಂಗ್ರೆಸ್ ಹೈಕಮಾಂಡ್‌ಗೆ ಒತ್ತಾಯಿಸಲಾಗಿದೆ.

ನಗರದ ಕಾನಿಪ ಕಾರ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾದಿಗ ಸಮಾಜದ ಮುಖಂಡ ಪ್ರಕಾಶ ತಳಗೇರಿ ಮಾತನಾಡಿ, ವಿಧಾನಸಭೆ, ಲೋಕಸಭೆ ಹಾಗೂ ರಾಜ್ಯಸಭೆ ಚುನಾವಣೆ ಸಮಯದಲ್ಲಿ ಮಾದಿಗ ಸಮುದಾಯಕ್ಕೆ ರಾಜಕೀಯ ಸ್ಥಾನಮಾನ ನೀಡುವ ಸಂದರ್ಭ ಬಂದಾಗ ಪಕ್ಷದ ನಾಯಕರು ನಿರ್ಲಕ್ಷ ಧೋರಣೆ ತೋರುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.



ಪ್ರಸ್ತುತ ಕಾಂತರಾಜ ಮತ್ತು ನ್ಯಾ.ಎ.ಜೆ.ಸದಾಶಿವ ಆಯೋಗಗಳ ವರದಿಯ ಮುಖ್ಯಾಂಶಗಳಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಸ್ಥಾನಮಾನಗಳು ದೊರಕದಿರುವುದು ಒಂದು ರೀತಿಯಲ್ಲಿ ಮಾದಿಗ ಸಮಾಜಕ್ಕೆ ಅನ್ಯಾಯವಾದಂತಾಗಿದೆ. ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿಯವರು ಮಹಿಳೆಯರಿಗೆ ಹಾಗೂ ಯುವಕರಿಗೆ ಪ್ರಾತಿನಿಧ್ಯ ನೀಡಲು ಆಸಕ್ತಿ ವಹಿಸಿದ್ದು, ಅದೇ ರೀತಿ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ ಅವರ ಪುತ್ರ ವಿನಯ.ಆರ್.ತಿಮ್ಮಾಪೂರ ಅವರಿಗೆ ಟಿಕೇಟ್ ನೀಡಬೇಕೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಕಾ ವೇಣುಗೋಪಾಲ, ರಾಜ್ಯ ಉಸ್ತುವಾರಿ ಸುರ್ಜೇವಾಲಾ ಸೇರಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ ಹಾಗೂ ಮುಖ್ಯಮಂತ್ರಿ ಸಿದ್ಧರಾಮಯ್ಯನವ-ರಿಗೂ ನಮ್ಮ ಸಮುದಾಯದಿಂದ ಒತ್ತಾಯಿಸುತ್ತೇವೆ ಎಂದು ಅವರು ಹೇಳಿದರು.

ಪ್ರಮುಖ ಮಹಾದೇವ ಮಾದರ ಮಾತನಾಡಿ, ಪ್ರಸ್ತುತ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿರುವ ಚಂದ್ರಪ್ಪ ಅವ-ರಿಗೆ ಕಳೆದ ಬಾರಿ ಚಿತ್ರದುರ್ಗದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲನ್ನನುಭವಿಸಿದ್ದರು. ಜಾತಿಯಿಂದ ಮಾದಿಗರಲ್ಲದ ಕಾರಣದಿಂದಾಗಿ ಅವರು ಸೋತಿದ್ದರು. ಮತ್ತೆ ಕಾಂಗ್ರೆಸ್ ಹೈಕಮಾಂಡ್ ಅದೇ ತಪ್ಪನ್ನು ಈ ಬಾರಿ ಮಾಡದೇ ಮಾದಿಗ ಸಮುದಾಯವರಾದ ವಿನಯ ತಿಮ್ಮಾಪೂರ ಅವರಿಗೆ ಟಿಕೇಟ್ ನೀಡಬೇಕೆಂಬುದು ಒಕ್ಕೊರಲಿನಿಂದ ಒತ್ತಾಯಿಸುತ್ತೇವೆ ಎಂದು ತಿಳಿಸಿದರು.

ಯಶವಂತ ಮಾದರ ಮಾತನಾಡಿ, ಲೋಕಸಭೆಯ 28 ಸ್ಥಾನಗಳಲ್ಲಿ 5 ಮೀಸಲು ಕ್ಷೇತ್ರಗಳಿದ್ದು, ಅವುಗಳಲ್ಲಿ ಬಹುತೇಕ ಸಹೋದರ ಚಲವಾದಿ ಜಾತಿಗೆ ಕಾಂಗ್ರೆಸ್ ಪಕ್ಷವು ಟಿಕೇಟ್ ನೀಡಲಿದ್ದು, ಚಿತ್ರದುರ್ಗ ಹಾಗೂ ಕೋಲಾರ ಕ್ಷೇತ್ರಗಳಲ್ಲಿ ಮಾದಿಗ ಸಮುದಾಯಕ್ಕೆ ನೀಡಬೇಕು. ಇದ-ರಿಂದ ರಾಜ್ಯದ 28 ಕ್ಷೇತ್ರಗಳಲ್ಲಿಯೂ ನಮ್ಮ ಸಮುದಾಯ ಕಾಂಗ್ರೆಸ್ ಪಕ್ಷದ ಗೆಲುವಿಗೆ ಶ್ರಮಿಸುತ್ತೇವೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಅವರು ಮೇಲಿಂದ ಮೇಲೆ ಸಂವಿಧಾನ ಬದಲಾಯಿಸಲಾಗುವುದೆಂದು ದೇಶ ವಿರೋಧಿ ಹೇಳಿಕೆ ನೀಡುತ್ತಾ ಬಂದಿರುವ ಬಿಜೆಪಿ ಪಕ್ಷದ ಹಿಡನ್ ಅಜೆಂಡಾವನ್ನು ಬಹಿರಂಗಪಡಿಸುತ್ತಿರುವ ಸಂಸದ ಅನಂತಕುಮಾರ ಹೆಗಡೆಯವರ ಹೇಳಿಕೆಯನ್ನು ಖಂಡಿಸಿ, ಕೂಡಲೇ ಅವರ ಮೇಲೆ ದೇಶದ್ರೋಹ ಕಾಯಿದೆಯಡಿ ಬಂಧಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಯಮನಪ್ಪ ದೊಡಮನಿ, ಸದಾಶಿವ ಮೇತ್ರಿ, ಭೀಮಶಿ ಮೇತ್ರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಮಹಿಳೆಯರು ಸಮಾಜದ ನಿರ್ಮಾತೃಗಳು




ಬೆಳಗಾವಿ: ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮಹಿಳಾ ಸಬಲೀಕರಣ ಕೋಶವು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿತು.

ಕಾರ್ಯಕ್ರಮಕ್ಕೆ ಮುಖ್ಯಅತಿಥಿಗಳಾಗಿ ಡಾ. ವನಿತಾ ತೊರವಿ ಮಕ್ಕಳ ಹಕ್ಕುಗಳ ಅಂತರಾಷ್ಟ್ರೀಯ ರಾಯಭಾರಿ ಐ.ಎಚ್.ಆರ್.ಓ ಇವರು ಆಗಮಿಸಿದ್ದರು. ಮಹಿಳಾ ಶಕ್ತಿ, ಯುವಶಕ್ತಿಯ ಬಗ್ಗೆ ಮಾತಾನಾಡಿದ ಅವರು ಅಧುನಿಕತೆಯ ಜೊತೆಗೆ ನಮ್ಮ ದೇಶದ ಸಂಸ್ಕೃತಿಯನ್ನು ವಿಶ್ವದೆಲ್ಲೆಡೆ ಸಾರಬೇಕೆಂದು ಕರೆಕೊಟ್ಟರು ಅವರು ವಿವಿಧ ದೇಶಗಳಿಗೆ ಭೇಟಿ ನೀಡಿದಾಗ ಭಾರತದ ಮಹಿಳೆಯರು, ಭಾರತದ ಸಂಸ್ಕೃತಿಯ ಬಗ್ಗೆ ಅನ್ಯ ದೇಶಿಯರು ಗೌರವ ಕೊಡುವುದನ್ನು ವಿವರವಾಗಿ ವಿವ-ರಿಸಿದರು. ಐ.ಎಚ್.ಆರ್.ಓ ಹಾಗೂ ಅದರ ಕೌನ್ಸಲಿಂಗ್ ಸೆಂಟ-ರ್‌ಗಳಿಂದ ಆಗುವ ಲಾಭದ ಬಗ್ಗೆ ವಿವರಿಸಿದರು, ಯಾರಿಗಾದರು ಸಹಾಯಬೇಕಿದ್ದರೆ ಅವರನ್ನು ಸಂಪರ್ಕಿಸಲು ಹೇಳಿದರು.

ಗೌರವಾನ್ವಿತ ಅತಿಥಿಗಳಾಗಿ ಆಗಮಿಸಿದ ಶ್ರೀಮತಿ ರಾಜಶ್ರೀ ಜೈನಾಪು ಕೆ.ಎ.ಎಸ್ ಕುಲಸಚಿವರು ರಾಣಿಚನ್ನಮ್ಮ ವಿಶ್ವವಿದ್ಯಾಲಯ ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡಿದರು. ಸರ್ಕಾರದ ಅನೇಕ ಸೌಲಭ್ಯಗಳ ಬಗ್ಗೆ ತಿಳಿಸಿ ಅವುಗಳ ಸದ್ಬಳಕೆ ಮಾಡಿಕೊಳ್ಳುವಂತೆ ಹೇಳಿದರು.

ಅಧ್ಯಕ್ಷಿಯ ಸ್ಥಾನವನ್ನು ವಹಿಸಿದ ನೂತನ ಗೌರವಾನ್ವಿತ ಕುಲಪತಿಗಳಾದ ಪ್ರೋ. ಸಿ.ಎಮ್.ತ್ಯಾಗರಾಜ ರವರು, ಸ್ತ್ರೀ ಶಕ್ತಿಯನ್ನು ಹುರುದುಂಬಿಸಿ ಮಹಿಳೆಯರು ಇನ್ನಷ್ಟು ಸಾಧಿಸಲು ಪ್ರೇರೆಪಿಸಿದರು. ಜ್ಞಾನವೇ ದೊಡ್ಡ ಶಕ್ತಿಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಸಿಬ್ಬಂದಿಗಳು, ವಿದ್ಯಾರ್ಥಿಗಳು, ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಬೇಕೆಂದು ಕರೆನೀಡಿದರು.

ಗೌರವಾನ್ವಿತ ಅತಿಥಿಗಳಾಗಿ ಹಣಕಾಸು ಅಧಿಕಾರಿಯಾದ ಎಸ್.ಬಿ.ಆಕಾಶ ಉಪಸ್ಥಿತರಿದ್ದರು. ವಿಶ್ವವಿದ್ಯಾಲಯದ ಮಹಿಳಾ ಸಾಧಕಿಯರಾದ ಡಾ. ನಂದಿನಿ ದೇವರಮನಿ, ಡಾ. ಶೋಭಾ ನಾಯಕ, ಡಾ. ಮಲ್ಲಮ್ಮ ರೆಡ್ಡಿ, ಡಾ. ನಾಗರತ್ನ ಪರಾಂಡೆ ಇವರನ್ನು ಸನ್ಮಾನಿಸಲಾಯಿತು.

ಮಹಿಳೆಯರ ಸವಾಲುಗಳಿಗೆ ಸಂಬಂಧಿಸಿದಂತೆ ಏರ್ಪಡಿಸಿದ್ದ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಯಿತು. ಮಹಿಳಾ 'ಡಿ' ದರ್ಜೆ ನೌಕರರಿಗೆ ಉಡ-'ಗೊರೆಗಳನ್ನು ನೀಡಿ ಅವರ ಕಾರ್ಯವನ್ನು ಶ್ಲಾಘಿಸಲಾಯಿತು. ಮಹಿಳಾ ಸಬಲೀಕರಣಕೋಶದ ನಿರ್ದೇಶಕರಾದ ಪ್ರೋ. ನಾಗರತ್ನ ವಿ ಪರಾಂಡೆ ಇವರು ಪ್ರಸ್ತಾವಿಕ ನುಡಿಗಳನ್ನು ಆಡಿದರು. ಮಹಿಳಾ ಸಬಲೀಕರಣಕೋಶದ ಸದಸ್ಯರಾದಡಾ. ಯಾಸ್ಮಿನ್ ನದಾಫ್‌ಇವರು ಸ್ವಾಗತ ಭಾಷಣ ನೇರವೇರಿಸಿ ಕೊಟ್ಟರು, ಮಹಿಳಾ ಸಬಲೀಕರಣ-ಕೋಶದ ಸದಸ್ಯರಾದಡಾ. ನಂದಿನಿ ದೇವರಮನಿ ಇವರುಅತಿಥಿ ಪರಿಚಯ ಮಾಡಿಕೊಟ್ಟರು. ಪ್ರಶಸ್ತಿ ವಿತರಣಾ ಕಾರ್ಯಕ್ರಮವನ್ನು ಡಾ. ಮಲ್ಲಮ್ಮ ವಿ ರೆಡ್ಡಿ ಇವರು ನಡೆಸಿಕೊಟ್ಟರು.

'ಡಿ' ದರ್ಜೆ ಮಹಿಳಾ ನೌಕರರಿಗೆ ಉಡುಗೊರೆ ನೀಡುವ ಕಾರ್ಯಕ್ರಮವನ್ನು ಡಾ. ಶಿವಲೀಲಾ ಹೀರೆಮಠ ಇವರು ನಡೆಸಿಕೊಟ್ಟರು. ಮಹಿಳಾ ಸಬಲೀಕರಣ ಕೋಶದ ಇನ್ನಿತರ ಸದಸ್ಯರಾದ ಶ್ರೀಮತಿ. ದೀಪಾ ಜೋಶಿ, ಶ್ರೀಮತಿ. ವಾಣಿ ಪೋತದಾರ್, ಕು. ಪೂಜಾ ಖಾತೇದಾರ, ಬೋರವ್ವ ಇವರು ಉಪಸ್ಥಿತರಿದ್ದರು. ಪ್ರವೀಣ ದಾವನೆ ಇಂಗ್ಲೀಷ ವಿಭಾಗದ ವಿದ್ಯಾರ್ಥಿ ಪ್ರಾರ್ಥಿಸಿದರು. ಮಹಿಳಾ ಸಬಲೀಕರಣ ಕೋಶದ ಸದಸ್ಯರಾದ ಡಾ.ಅಶ್ವಿನಿ ಜಾಮುನಿ ಕಾರ್ಯಕ್ರಮ ನಿರೂಪಿಸಿದರು.

## ಗ್ರಾಮೀಣ ಕ್ಷೇತ್ರಕ್ಕೆ ಇನ್ನಷ್ಟು ಬೃಹತ್ ಯೋಜನೆಗಳನ್ನು ತರಲು ಕ್ರಮ: ಮೃಣಾಲ ಹೆಬ್ಬಾಳಕರ್




ಬೆಳಗಾವಿ: ಬೆಳಗಾವಿ ಗ್ರಾಮೀಣ ಕ್ಷೇತ್ರದ ಹಿಂಡಲಗಾ ಗ್ರಾಮದ ವಿನಾಯಕ ನಗರ ಹಾಗೂ ವಿಜಯ ನಗರದ ರಸ್ತೆ, ಫುಟ್ಪಾತ್ ಹಾಗೂ ಒಳಚರಂಡಿ ನಿರ್ಮಾಣದ ಕಾಮಗಾರಿಗಳಿಗೆ ಸ್ಥಳೀಯ ಜನ ಪ್ರತಿನಿಧಿಗಳು ಹಾಗೂ ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್ ಭೂಮಿ ಪೂಜೆ ನಡೆಸುವ ಮೂಲಕ ಕಾಮಗಾರಿಗೆ ವಿದ್ಯುಕ್ತ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಮೃಣಾಲ ಹೆಬ್ಬಾಳಕರ್, ಗ್ರಾಮೀಣ ಕ್ಷೇತ್ರದಲ್ಲಿ ಅಭಿವೃದ್ಧಿ ನಿರಂತರ. ಕ್ಷೇತ್ರದ ಎಲ್ಲ ಭಾಗಗಳಲ್ಲಿ ಒಂದಿಲ್ಲೊಂದು ಅಭಿವೃದ್ಧಿ ಯೋಜನೆ ನಡೆಯುತ್ತಲೇ ಇರುತ್ತವೆ. ರಸ್ತೆ, ನೀರು, ಶಾಲೆ, ದೇವಸ್ಥಾನಗಳ ಜೊತೆಗೆ ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಯುವಜನತೆಗೆ ಉದ್ಯೋಗ ನೀಡುವಂತಹ ಯೋಜನೆಗಳನ್ನು ತರಲು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಯೋಜನೆ ಹಾಕಿಕೊಂಡಿದ್ದಾರೆ, ಆ ಕುರಿತು ಈಗಾಗಲೆ ಪ್ರಯತ್ನ ಆರಂಭಿಸಿದ್ದಾರೆ ಎಂದು ತಿಳಿಸಿದರು. ಈ ಸಮಯದಲ್ಲಿ ಸ್ಥಳೀಯ ನಿವಾಸಿಗಳು, ರಾಹುಲ್ ಉರನಕರ್, ವಿಠ್ಠಲ ದೇಸಾಯಿ, ಬಿ.ಬಿ ಪಾಟೀಲ, ಪ್ರವೀಣ ಪಾಟೀಲ, ಗಜಾನನ ಬಾಂಡೇಕರ್, ಸೀಮಾ ದೇವಕರ್, ಪ್ರೇರಣಾ ಮಿರಜಕರ್ ಮುಂತಾದವರು ಉಪಸ್ಥಿತರಿದ್ದರು.

## ಜಗದೀಶ್ ಶೆಟ್ಟರ್ ಗೆ, ಈಗ ಬೀಗರ ಕ್ಷೇತ್ರ ಬೆಳಗಾವಿಯೇ ಗತ್ತಿ

ಬೆಳಗಾವಿ- ಬಿಜೆಪಿ ಮುಖಂಡ,ಮಾಜಿ ಸಿಎಂ ಜಗದೀಶ್ ಶೆಟ್ಟರ್ ಅವರಿಗೆ ಧಾರವಾಡ ಅಥವಾ ಹಾವೇರಿಯಿಂದ ಲೋಕಸಭಾ ಕ್ಷೇತ್ರದಿಂದ ಸ್ಪರ್ದಿಸುವ ಒಲವು ಇತ್ತು,ಆದ್ರೆ ಈ ಎರಡೂ ಕ್ಷೇತ್ರಗಳಿಂದ ಬಿಜೆಪಿ ಅಭ್ಯರ್ಥಿಗಳು ಘೋಷಣೆಯಾಗಿದ್ದು ಜಗದೀಶ್ ಶೆಟ್ಟರ್ ಅವರಿಗೆ ಈಗ ಬೀಗರ ಕ್ಷೇತ್ರ ಬೆಳಗಾವಿಯೇ ಗತಿ ಎಂದು ಹೇಳಲಾಗುತ್ತಿದೆ.

ಜಗದೀಶ್ ಶೆಟ್ಟರ್ ಅವರು ಲೋಕಸಭೆಗೆ ಸ್ಪರ್ದೆ ಮಾಡುವದು ಖಚಿತವಾದ್ರೆ ಅವರಿಗೆ ಬೆಳಗಾವಿ ಕ್ಷೇತ್ರವೇ ಉಳಿದಿರುವ ದಾರಿ, ಅವರು ನಿಲ್ತಾರೋ ಅಥವಾ ಅವರ ಸೊಸೆ ಸುರೇಶ್ ಅಂಗಡಿ ಪುತ್ರಿ ಶ್ರದ್ಧಾ ಶೆಟ್ಟರ್ ಅವರನ್ನು ಕಣಕ್ಕಿಳಿಸಲು ಸಮ್ಮತಿ ನೀಡ್ತಾರೋ ಎನ್ನುವದು ನಿಗೂಢವಾಗಿದ್ದು ಈ ಕ್ಷೇತ್ರದ ಮೇಲೆ ಮಾಜಿ ಸಂಸದ ರಮೇಶ್ ಕತ್ತಿ,



ಮಾಜಿ ಶಾಸಕ ಸಂಜಯ ಪಾಟೀಲ,ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯ ಮಹಾಂತೇಶ್ ಕವಟಗಿಮಠ ಅವರು ಬೆಳಗಾವಿ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಪಡೆಯಲು ದೆಹಲಿಯಲ್ಲಿ ಎಲ್ಲಿಲ್ಲದ ಕಸರತ್ತು ನಡೆಸಿದ್ದಾರೆ.

ಬೆಳಗಾವಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯ ಘೋಷಣೆಯ ವಿಚಾರ ಈಗ ಬಿಜೆಪಿ ನಾಯಕರಿಗೆ ಕಗ್ಗಂಟಾಗಿದೆ.

ಈ ಕ್ಷೇತ್ರದ ಅಭ್ಯರ್ಥಿ ಕೊನೆಯ ಘಳಿಗೆಯಲ್ಲಿ ಘೋಷಣೆಯಾಗುವ ಸಾಧ್ಯತೆ ಇದೆ ಅಲ್ಲಿಯವರೆಗೂ ಗುದ್ದಾಟ ಮುಂದುವರೆಯುವ ಲಕ್ಷಣಗಳು ಕಾಣಿಸುತ್ತಿವೆ.

ಬೆಳಗಾವಿಯ ಬಿಜೆಪಿ ನಾಯಕರು ಬೇರೆ ಜಿಲ್ಲೆಯ ಅಭ್ಯರ್ಥಿ ಬೇಡ, ಎನ್ನುವ ಬೇಡಿಕೆ ಇಟ್ಟಿರುವ ಬೆನ್ನಲ್ಲಿಯೇ ಮಾಜಿ ಮಂತ್ರಿ ಮುರುಗೇಶ್ ನಿರಾಣಿ ಅವರು ಬೆಳಗಾವಿ ಜಿಲ್ಲೆಗೆ ಎಂಟ್ರಿ ಹೊಡೆದಿದ್ದಾರೆ. ಅವರೂ ಸಹ ಬೆಳಗಾವಿ ಟಿಕೆಟ್ ಗಾಗಿ ದೆಹಲಿಯಲ್ಲಿ ಲಾಭಿ ನಡೆಸಿದ್ದಾರೆ. ಅವರ ಸಹೋದರ ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಅವರು ಬೆಳಗಾವಿ ಜಿಲ್ಲೆಯ ಬಿಜೆಪಿ ನಾಯಕರನ್ನು ಭೇಟಿಯಾಗಿ ಹೋಗಿದ್ದಾರೆ.

ಲಕ್ಷ್ಮೀ ಹೆಬ್ಬಾಳಕರ್ ಪುತ್ರ ಮೃನಾಲ ಹೆಬ್ಬಾಳಕರ್ ಅವರಿಗೆ ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಘೋಷಣೆಯಾದ್ರೆ ಈ ಕ್ಷೇತ್ರದಿಂದ ಪ್ರಬಲ ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ ಸೇರಿದ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಬಿಜೆಪಿ ನಾಯಕರು ತಂತ್ರ ರೂಪಿಸಿದ್ದಾರೆ ಎಂದು ಹೇಳಲಾಗುತ್ತಿದ್ದು ,ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ರಾಜಕೀಯ ಪಕ್ಷಗಳು ಬೆಳಗಾವಿ ಕ್ಷೇತ್ರದಲ್ಲಿ ಕಾದು ನೋಡುವ ತಂತ್ರವನ್ನು ಅನುಸರಿಸುತ್ತಿವೆ.ಈ ಕ್ಷೇತ್ರದಲ್ಲಿ ಮೊದಲು ಯಾವ ಪಕ್ಷ ತನ್ನ ಅಭ್ಯರ್ಥಿ ಯನ್ನು ಘೋಷಣೆ ಮಾಡುತ್ತದೆ ಎನ್ನುವದನ್ನು ಕಾದು ನೋಡಬೇಕಾಗಿದೆ.

BELAGAVI VARADI KANNADA DAILY MORNING : Editor, Printer, Publisher & Owned By : Satish Basavani Gudagenatti. Basavani House No.53, Ashray Colony Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089